ಕೊರವಂಜಿ

Koravanji

ಫೆಬ್ರವರಿ

೧೯೫೮



ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಶ್ರೀನಿವಾಸಂ

ಶ್ರೀ|| ಕಾಮತ್

ಶ್ರೀಮತಿ|| ಪದ್ಮಿನಿ

ಶ್ರೀ|| ಸೋಮಣ್ಣ

ಶ್ರೀ|| ಅ. ರಾ. ಸೇ.

ಶ್ರೀ|| ರಾಮಿ

ಶ್ರೀ|| ಎಸ್. ವಿ. ಭಟ್ಟ

ಶ್ರೀ|| ನಾ. ಕ.

ಶ್ರೀ|| ಕುಮಾರ್

ಶ್ರೀ|| ಪಾರ್ಥಸಾರಥಿ

ಶ್ರೀ||| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ

ತಿಳಿನಗೆಯ ಮಾಸಪತ್ರಿಕೆ

ಅನುಭವದಿಂದ ಬಂದ ಜ್ಞಾನ

ಶ್ರೀಗಂಧದ ಮರಗಳನ್ನು ಸಮೃದ್ಧವಾಗಿ ಬೆಳೆಸುವುದರ ರಹಸ್ಯವು ನೂರಾರು ವರ್ಷಗಳ ಅನುಭವವಾದ ಮೇಲೂ ಕೂಡಾ ಇನ್ನೂ ಮೈಸೂರು ಸೀಮೆ ಯೊಂದರ ವಶದಲ್ಲಿಯೇ ಇರುವ ಸ್ವತ್ತಾಗಿದೆ. ಮೈಸೂರು ಸರ್ಕಾರದ ಕಾರ್ಖಾನೆ ಗಳಲ್ಲಿ ಬಟ್ಟಿಯಿಳಿಸಿದ ಅತ್ಯಂತ ಮನೋಹರವಾದ ಪರಿಮಳವುಳ್ಳ ಶ್ರೀಗಂಧದ ಎಣ್ಣೆಯೇ ಪ್ರಪಂಚದಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದದ್ದು. ಈ ಎಣ್ಣೆಯು ಸರ್ವ ಸಮರ್ಪಕವಾದ ಸ್ಥಳ ಸನ್ನಿವೇಶದಲ್ಲಿ ಬೆಳೆದು ಕಡಿದು ಕೂಡಿಟ್ಟ ಶ್ರೀಗಂಧದ ಮರದಿಂದ ತಯಾರಾದದ್ದು. ಅದರ ಸುವಾಸನೆಯು ಮರದಲ್ಲಿ ಸಾಕ್ಷಾತ್ತಾಗಿರುವ ಎಣ್ಣೆಯದು ಹೇಗೆಯೋ ಹಾಗೆಯೇ ತುಂಬಿಕೊಂಡು ಸ್ವಲ್ಪವೂ ಕುಂದದೆ ಇರುತ್ತದೆ. ಲೋಕದಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಸಾಬೂನುಗಳ ಮತ್ತು ಪರಿಮಳ ದ್ರವ್ಯಗಳ ತಯಾರಿಕೆಯಲ್ಲಿ ಈ ಸುವಾಸನೆ ಉಪಯುಕ್ತ ವಾಗುತ್ತದೆ.

★


ಮೈಸೂರು ಶ್ರೀಗಂಧದ ತೈಲ

★



For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY.




ಯಾವ ಕೆಲಸಕ್ಕೂ ಇರಲಿ



ತಕ್ಕುದಾದ ಷಾಲಿಮಾರ್ ಪೇಯಿಂಟ್



ಅನ್ವಯಿಸುತ್ತದೆ.



be BRIGHT — specify

ಸ್ಪಷ್ಟವಾಗಿ ಹೇಳಿರಿ

ಷಾಲಿಮಾರ್ ಪೇಯಿಂಟ್ ಪ್ರಾಡಕ್ಟ್‌ಗಳು

ಎಲ್ಲಾ ತರದ ನಮ್ಮ ತಯಾರಿಕೆಗಳ ವಿವರಗಳನ್ನು ಕೊಡುವ 'ಷಾಲಿಮಾರ್ ರೆಡಿ ರೆಫರೆನ್ಸ್' ನೋಟಸುಬಗ್ಗೆ ಪೋ. ಬಾ. 68, ಕಲ್ಕತ್ತ - 1 ಕ್ಕೆ ಬರೆದುಕೊಳ್ಳಿರಿ.

SPV/ 359

SHALIMAR PAINT, COLOUR VARNISH CO, PRIVATE LTD.

ಕೊರವಂಜಿ

ಸಂಪುಟ ೧೭ | ಫೆಬ್ರುವರಿ ೧೯೫೮ | ಸಂಚಿಕೆ ೧೧

ಕುಹಕಿಡಿಗಳು

ಚಾಗ್ಲಾ ಕಮಿಷನ್ನಿನ ವರದಿಗಳನ್ನೋದಿದ ಮೇಲೆ, ಟಿಟಿಕೆಗೆ ಬದಲು ಮುಂದ್ರಾರವರನ್ನು ಆರ್ಥಿಕ ಸಚಿವರನ್ನಾಗಿ ಮಾಡಿಕೊಂಡಿದ್ದರೆ, ಹರೆಯ ವಯಸ್ಸಿನ ಹುರುಪು, ತೀವ್ರ ಚಾಣಾಕ್ಷಬುದ್ಧಿ ಹಾಗೂ ನಮ್ರತೆಯಿರುವ ಕಾರಣ, ಎರಡನೆ ಐದು ವರ್ಷದ ಯೋಜನೆಯನ್ನು ಯಶಸ್ವಿಯನ್ನಾಗಿ ಮಾಡಬಹುದಿತ್ತು ಅನ್ನಿಸುತ್ತೆ ಅಲ್ಲವೇ?

*   *   *

ಅಖಿಲ ಭಾರತ ಷೂಟಿಂಗ್ ಸ್ಪರ್ಧೆಯಲ್ಲಿ ಯಶಸ್ವಿಯಾದ ಚಾಂಪಿಯನ್ನನನ್ನು ಅವರ ಅಪ್ರತಿಮ ಜಯಕ್ಕೆ ಮೂಲಕಾರಣವೇನೆಂದು ಕೇಳಲು, ಆತ ಹೇಳಿದ : “ಎದುರಿಗೆ ವರಮಾನ ತೆರಿಗೆ ಅಧಿಕಾರಿ ನಿಂತಿದ್ದಾನೆ ಎಂದು ಮನಸ್ಸಿನಲ್ಲಿ ಊಹಿಸಿ ಗುರಿ ಇಟ್ಟು ಹೊಡೆಯುತ್ತೇನೆ. ೧೦೦ಕ್ಕೆ ೧೦೦ ಸಾರಿ ಜಯವಾಗುತ್ತದೆ” ಎಂದು ಹೇಳಿದರೆಂಬುದು ಸುಳ್ಳಂತೆ.

*   *   *

ಪದ್ಮಭೂಷಣ ಸೆಟಲ್‌ವಾಡ್‌ರವರು ಕಾನ್ವೊಕೇಷನ್ನಿನ ಉಪದೇಶ ಭಾಷಣ ಮಾಡಲು ಬರುತ್ತಾರಷ್ಟೆ.

—ಹಾಗೆ ಬರುವಾಗ ಶ್ರೀ ಮುಂದ್ರಾರವರನ್ನೂ ಕರೆದುಕೊಂಡು ಬನ್ನಿ ಎಂದು ಪದವೀಧರ ವಿದ್ಯಾರ್ಥಿಗಳು ತಂತಿ ಕೊಟ್ಟಿದ್ದಾರೆಂಬುದು ಶುದ್ಧ ಸುಳ್ಳು.

*   *   *

ಆಕಾಶವಾಣಿಯು ಹಜಾರದಲ್ಲಿ ಆಳುವೋರೆ ಹಾಕಿಕೊಂಡು ನಾಲ್ಕು ಜನ ಕೂತಿದ್ದವರು ಯಾರು ಗೊತ್ತಾಯ್ತೇ ?

—ನಕ್ಕು ನಲಿಯಿರಿ ಪ್ರಸಾರದಲ್ಲಿ ಭಾಗವಹಿಸುವ ಹಾಸ್ಯವೃಂದದವರು !

* * *

ಮಾರ್ಕೆಟ್ಟಿನಲ್ಲಿ ಒಬ್ಬ ಹಸಿರುಬಣ್ಣದ ಎಳೆನಿಂಬೆಕಾಯಿಗಳನ್ನು ಗುಡಿ ಹಾಕಿಟ್ಟುಕೊಂಡಿದ್ದ. ಮುಂದ್ರಾ ನಿಂಬೇಕಾಯಿ ಬೇಗ ಕೊಳ್ಳಿ – ಇಲ್ಲದಿದ್ದರೆ ಸರ್ಕಾರಕ್ಕೆ ಮಾರಿಬಿಡ್ತೇನೆ ಎಂದು ಕೂಗುತ್ತಿದ್ದ.

ಪಕ್ಕದಲ್ಲಿದ್ದವ ಬಲಿತ ಹಳದಿ ಗಜನಿಂಬೆಹಣ್ಣುಗಳನ್ನು ಗುಡ್ಡೆಹಾಕಿದ್ದ. ಸಂಜೆಹೊತ್ತಿಗೆ ಎಳೆನಿಂಬೆಕಾಯಿನೋನು ಜೇಬನ್ನು ಝಣಝಣ ಅನ್ನಿಸಿದ. ಪಕ್ಕದವ ತುಂಬಿದ ಬುಟ್ಟಿ ತಲೆಮೇಲಿಟ್ಟುಕೊಂಡು ಮನೆಗೆ ಹೋದ.

—ಎಂದು ಪುಟಾಣಿ ಕತೆಯನ್ನು ನಮ್ಮ ಸರೋಜ ಬರೆದಿದ್ದಳು.

* * *

ಹೆಬ್ಬಿಗುಬ್ಬಾಲಿಯವನು ಬೆಂಗಳೂರಿಗೆ ಬಂದಿದ್ದಾಗ, ಷಹರಿನ ನೆಂಟ ಅವನಿಗೆ "ಒಂದೇ ಮಾರ್ಗದ" ದಾರಿಗಳನ್ನು ವಿಶದೀಕರಿಸಿದಾಗ, ಆತ ಅಂದನಂತೆ "ಇದೆಲ್ಲಾ ನನಗೆ ಹೊಸದಲ್ಲ ಇಂತಹ ಜೇಬುಗಳನ್ನಿಟ್ಟೇ ನಾವು ಅಂಗಿ ಹೊಲಿಸೋದು" ಎಂದು.

* * *

ವಿಕ್ಟೋರಿಯಾ ಶಿಲಾಪ್ರತಿಮೆಯನ್ನು ತೆಗೆಯುವ ಪ್ರಯತ್ನವನ್ನು ಸೋಷಿಯಲಿಸ್ಟರವರು ಮಾಡಿದರಂತೆ.

—ಅಷ್ಟು ಭಾರವಾದ ದಢೂತಿ ಪ್ರತಿಮೆಯನ್ನು ಅವರು ಕೂಲಿಯವರ ಸಹಾಯವಿಲ್ಲದೇ ನಾಯಕರೇ ತೆಗೆದರೆ— ಖಂಡಿತ ಅವರ ಕೈಗೆ ಸರ್ಕಾರಾನ ವಹಿಸಬಹುದು ಅನ್ನಿಸುತ್ತೆ ಅಲ್ಲವೇ ?

* * *

ಮೊನ್ನೆ ಹುರಿಗಾಳು ಮಾರೋಳು, ಕಬ್ಬನ್‌ಪಾರ್ಕಿನಲ್ಲಿ, ಕೂಗುತ್ತಿದ್ದಳು — "ಇವೆಲ್ಲಾ ಬ್ಲೂ ಚಿಪ್ಸ್ – ಹುರಿಗಾಳು — ಬ್ಲೂ ಚಿಪ್ಸ್ – ಹುರಿಗಾಳು" ಎಂದು.

—ಘರಮಾಘರಂ = ಬ್ಲೂ ಚಿಪ್ಸ್ ; ಇದನ್ನು ಕನ್ನಡ ಇಂಗ್ಲಿಷ್ ನಿಘಂಟಿನವರು ಗಮನಿಸಬೇಕು.

* * *

ವೀಣೆ ಆರ್ಯರ ಕೃತಿ – ಹಾರ್ಮೋನಿಯಂ ದ್ರಾವಿಡದವರ ಕೃತಿ ಅಂದಮೇಲೆ ತಮಿಳುನಾಡಿನಲ್ಲಿ ಇನ್ನುಮೇಲೆ ಸಂಗೀತ ಕಛೇರಿಗಳಲ್ಲಿ ವೀಣೆ ಮುರಿದು ಹಾರ್ಮೋನಿಯಂ ಹೂಡುವ ಚಳುವಳಿಯನ್ನು ಪೆರಿಯಾರ್‌ರವರು ನಡೆಸುತ್ತಾರೆ ಎಂಬುವುದು ಖಚಿತವಲ್ಲವಂತೆ.

ಉರಿಗಾಳು

ಶಾಲಾ ಮಕ್ಕಳು ಉಪಾಧ್ಯಾಯ ಉಪಾಧ್ಯಾಯಿನಿಯರನ್ನು ಕಂಡಾಗ, ಗುಡ್ ಮಾರ್ನಿಂಗ್ ಎನ್ನುವುದರ ಬದಲು, ಅಚ್ಚಕನ್ನಡದಲ್ಲ 'ನಮಸ್ಕಾರ' ಎನಬೇಕು ಎಂಬ ಹುಕುಮನ್ನು ಜಾರಿಮಾಡಲಾಗಿದೆ. ಆದರೆ, ನಮಗಿಂತ ಚಿಕ್ಕವರಾದವರಿಗೆ ನಾವು ನಮಸ್ಕಾರ ಮಾಡುವುದು, ಅಸಂಸ್ಕೃತರ ಲಕ್ಷಣ ಎನ್ನುತ್ತಾರಲ್ಲಾ, ಅಂಥ ಪರಿಸ್ಥಿತಿಯಲ್ಲಿ ಏನು ಮಾಡುವುದು ?

* * *

ಕಾಶೀವಿಶ್ವೇಶ್ವರ ದೇವಾಲಯದೊಳಕ್ಕೆ 'ಅಸ್ಪೃಶ್ಯ' ರೆನಿಸಿರುವ ಹರಿಜನರ ತಂಡವೊಂದು ಈಚೆಗೆ ಪ್ರವೇಶಮಾಡಲು ಯತ್ನಿಸಿತಂತೆ ...ಆ ತಂಡದ ನಡುವೆ ಕಾಶೀ ವಿಶ್ವೇಶ್ವರನೂ ಇದ್ದನಂತೆ.

* * *

ಬಳ್ಳಾರಿ ಸಾಹಿತ್ಯ ಸಮ್ಮೇಲನದ ಕಾರ್ಯಕಲಾಪಗಳಿಂದಾಗಿ, ಮೈಸೂರು ಎಂಬ ಹೆಸರು 'ಮೈಸ್+ಊರು' ಎಂಬ ಶುದ್ಧ ಕನ್ನಡ ಪದವೆ? ಮಹೀಶೂರಪುರ, ಮಹೀಸುರಪುರ ಎಂಬ ಸಂಸ್ಕೃತ ಪದಗಳಲ್ಲೊಂದರ ತದ್ಭವವ ?—ಎಂಬ ವಾದ ಅನ್ಯಾಯವಾಗಿ ಹುಟ್ಟಿದೆ....ಒಟ್ಟಿನಲ್ಲಿ, ಎತ್ತು ಕೆರೆಗೆಳೆದರೆ, ಕೋಣ ಏರಿಗೆಳೆಯಿತು, ಎಂಬ ಸಮಾಚಾರವಾಗಿದೆ, ಈ ಹೆಸರುಗಳ ತಿಕ್ಕಾಟ.

* * *

ಮೂಲವಿಗ್ರಹಗಳು 'ನಾವು ಇನ್ನು ಗುಡಿಗಳೊಳಗೆ ತೆಪ್ಪಗೆ ಕುಳಿತಿರಲಾರೆವು' ಎಂದು ಎಂಟು ಮೂಲೆಗಳಿಗೂ ಓಡಾಡುತ್ತಿರುವ ಈ ಕಾಲದಲ್ಲಿ, ಉತ್ಸವ ಮೂರ್ತಿಗಳ ಅವಶ್ಯಕತೆ ತಾನೆ ಏನು ?—ಎಂದು ಶ್ರೀ ಗೋಕಾಕರಿಗೆ ಯಾರೋ ಪತ್ರ ಬರೆದಿದ್ದಾರಂತೆ.

* * *

ಸಿಗರೆಟ್ ಸೇದಿದರೆ ಕಾನ್ಸರ್ ಹುಣ್ಣು ಬರುವ ಸಂಭವ, ಎಂಬ ಅಭಿಪ್ರಾಯವನ್ನು ಕೆಲವರು ಹೇಳತೊಡಗಿರುವುದರಿಂದ, ಸಿಗರೆಟ್ ಸೇದುವ ಹುಡುಗರಿಗೆ ತಾವು ಎಂಥ ಶೂರರು, ಕಣ್ಣು ತೆರೆದು ಅಪಾಯದ ಕಡೆ ನಿರ್ಭೀತರಾಗಿ ಧಾವಿಸುವ ಪರಾಕ್ರಮಿಗಳು, ಎಂಬ ಒಂದು ಹೊಸ ಹುರುಪು ನೀಡಿದಂತಾಗಿದೆಯಂತೆ.

* *

ರಾಜ್ಯದ TOURIST ಪ್ರವಾಸಿ ಇಲಾಖೆಗೆ. ಅನೇಕ ಹಳ್ಳಿಗಳಿಂದ ಪತ್ರ ಬಂದಿದೆಯಂತೆ, ತಮ್ಮ ಊರನ್ನು ಒಂದು ಸೆಂಟರಾಗಿ ಪರಿವರ್ತಿಸಿ, ವಿದೇಶಿ ಹಾಗೂ ಸ್ವದೇಶೀ ಯಾತ್ರಿಕರನ್ನು ಅಲ್ಲಿಗೆ ಕರೆತರಲು ಏರ್ಪಾಟುಮಾಡಿ ಎಂದು....ಅವುಗಳ ಪೈಕಿ ಒಂದು ಪತ್ರದಲ್ಲಿ, ಸ್ವಾಮಿ! ನಮ್ಮ ಹಳ್ಳಿಗೆ ಪ್ರವಾಸಿಗರು ಬಂದರೆ, ಅವರನ್ನು ನಾವು ಮಾತನಾಡಿಸದೆ ಹಿಂದಕ್ಕೆ ಕಳುಹಿಸುತ್ತೇವೆ" ಎಂದು ಬರೆದಿದಾರಂತೆ ...ಇದಕ್ಕಿಂತ ದೊಡ್ಡ ಉಪಕಾರ ಯಾರು ತಾನೆ ಮಾಡಬಲ್ಲರು ?

*   *   *

"ಇದುವರೆಗೂ ಆದ ಮೋಸವನ್ನೆಲ್ಲ ನಾವು ಮನ್ನಾಮಾಡಿದೇವೆ, ಇನ್ನುಮೇಲೆ ಹುಷಾರ್" ಎಂಬ ಹುಕುಂ ಒಂದು ಸದ್ಯದಲ್ಲೇ ಹೊರಡಲಿದೆಯಂತೆ....ಹಲವರ ಕಾರ್ಯಕ್ರಮಗಳು ಪೂರೈಸಿವೆ, ಎಂಬ ವರದಿ ತಲುಪಿದ ತಕ್ಷಣ, ಈ ಆಜ್ಞೆಯನ್ನು ಹೊರಗೆಡಹಲಾಗುವುದಂತೆ.

*   *

"ಶನಿಗ್ರಹಕ್ಕೆ ಅಷ್ಟೊಂದು ಉಪಗ್ರಹಗಳಿರುವುದು ಏಕೆಂದರೆ, ಅದರ ತೂಕ, ಪ್ರಭಾವ ಹಾಗೂ ಭ್ರಮಣಶಕ್ತಿ; ಉಪಗ್ರಹಗಳನ್ನು ತನ್ನ ಸುತ್ತ ಸುತ್ತಬೇಕೆಂದು ಶನಿ ಬಯಸಿದ್ದಲ್ಲ; ಅವು ತಾವಾಗಿಯೇ ಆಕರ್ಷಿಸಲ್ಪಟ್ಟ ವಿಧಿಯಿಲ್ಲದೆ, ಶನಿಯ ಸುತ್ತ ಸುತ್ತುತ್ತಿವೆ" (ಜ್ಯೋತಿಶಾಸ್ತ್ರಗ್ರಂಥ) .... ರಾಜಕೀಯ ಶನಿಗ್ರಹಗಳ ವಿಷಯದಲ್ಲೂ ಇದೇ ಮಾತು ನಿಜವೆನಿಸಬೇಕಲ್ಲವೆ ?

*   *   *

ಅಚ್ಚುಕೂಟವೊಂದರಲ್ಲಿ ನಾಲ್ಕೈದು ಸಹಸ್ರ ಅಕ್ಷರಗಳ ಮೊಳೆಗಳನ್ನು ಕಳ್ಳರು ಅಪಹರಿಸಿರುವುದರಿಂದ, ತಾವು ಕೇವಲ ನವ್ಯಕಾವ್ಯಗಳನ್ನು ಮಾತ್ರ ಅಚ್ಚು ಮಾಡಿಕೊಡಲು ಈಗ ಶಕ್ಯರಾಗಿದೇವೆ ಎಂದು ಅವರು ತಿಳಿಸಿದಾರೆ....ಯಾವ ಅಕ್ಷರಗಳು ಹೆಚ್ಚು ಕಳುವಾಗಿವೆ ಎಂಬುದನ್ನು ಇದರಿಂದ ನಾವು ಊಹಿಸಬಲ್ಲೆವು

*   *   *   *   *   *   *   *   *

ಬೆಳಗಾಂನಲ್ಲಿ ನಡೆಯುವ ಭಾರತರತ್ನ ಕರ್ವೆಯವರ ಅಭಿವಂದನಾ ಸಭೆಗೆ ಕನ್ನಡದವರು ಏರ್ಪಡಿಸಿದ್ದಾರೆಂಬ ಕಾರಣದಿಂದ, ಮಹಾರಾಷ್ಟ್ರೀಯರು ಬಹಿಷ್ಕಾರ ಹಾಕುತ್ತಿದ್ದಾರೆಂಬುದು ಸುಳ್ಳಂತೆ.

*

ಭಿಲಾಯ್‌ಗೆ ಮೈಸೂರಿನ ಅದುರು – ೬೦೦೦೦ ಟನ್ನು. (ಶಿರೋನಾಮೆ)

– ಉತ್ತರದವರಿಗೆ ಮೈಸೂರಿನವರು ಅದುರೋದು ಮೊದಲಿನಿಂದಲೂ ಉಂಟಲ್ಲವೇ ?

ಕೊರನಾವಲೋಕನ

ಕಂಭಗಳಿಗೆಲ್ಲಾ ತ್ರಿವರ್ಣದ ಕಾಗದದ ಪಟ್ಟಿಪಟ್ಟಿಗಳನ್ನು ಹಚ್ಚಿದ್ದರು. ಸೂರಿಗೆಲ್ಲಾ ಕಾಗದದ—ಅದೇ ತ್ರಿವರ್ಣ ರಂಗಿನ—ಕಾಗದದ ತೋರಣಗಳನ್ನು ಅಡ್ಡಾದಿಡ್ಡಿ ಜೇಡರ ಬಲೆ ಕಟ್ಟಿದಂತೆ ಕಟ್ಟಿದ್ದರು. ಭಾರತ ನಮ್ಮದೇಶ. ಅಂದವಾಗಿ ಬಾಗಿಲಿಗೆ ಹಸಿರುತೋರಣ ಕಟ್ಟಿದೆ, ಈ ಎಡೆಬಿಡಂಗಿ ಅರೆ ಆಂಗ್ಲ ಅಭ್ಯಾಸ ಇನ್ನೂ ಹೋಗಿಲ್ಲವಲ್ಲಾ ಎನ್ನಿಸುತ್ತಿತ್ತು. ಸುಮಾರು ಐದು ಘಂಟೆ ಸಂಜೆ. ಸಹಜವಾಗಿ ಸರ್ಕಾರಿ ನೌಕರರು ತಮ್ಮ ತಮ್ಮೆದುರಿಗೆ ಇರುವ ಫೈಲುಗಳಲ್ಲಿ ಏನಿರಬಹುದು ಎಂದು ಸ್ಥೂಲವಾಗಿ ತಿಳಿದುಕೊಂಡು ಕಟ್ಟಿಡುವ ವೇಳೆ.

ಆ ವೇಳೆಗೆ ಕ್ಲಬ್ಬಿನ ವರಾಂಡದಲ್ಲಿ, ಸುತ್ತ ೬–೭ ಜನರನ್ನು ಕೂಡಿಸಿಕೊಂಡು ಅರವಾಮುದು ಸಂಭಾಷಣೆ ಬಿಗಿಯುತ್ತಿದ್ದಾನೆ.

ಇನ್ನು ಮೇಲೆ ನೋಡಿ! ನಮ್ಮ ದೇಶದ ಪ್ರಗತೀನ. ರಷ್ಯನ್ನರು ೪೦ ವರ್ಷ ಸ್ವಾತಂತ್ರ್ಯ ಪಡೆದ ಮೇಲೆ ಸ್ಪೂಟ್ನಿಕ್ ಹಾರಿಸಿದರು. ಇನ್ನೂ ಮೂರು ವರ್ಷಗಳಲ್ಲಿ ನಾವು ಭಾರತದಿಂದ ಭರಟ್ನೀಕ್ ಹಾರಿಸುವಂತೆ ಮಾಡುತ್ತೇನೆ ಲೋಕ ಸಭೆಯ ಸದಸ್ಯರಿಗೆಲ್ಲಾ ಪತ್ರ ಬರೆದಿದ್ದೇನೆ—ನೆಹ್ರೂಗೆ ಸ್ವಂತ ಪತ್ರ ಬರೆದು ಮುದ್ದಾಂ ಕಳಿಸಿದ್ದೇನೆ.

"ಏನಂತ ಬರೆದಿದಿ" ಎಂದು ಕೇಳಿದ ಬಾಲು. ಕೈಲಿದ್ದ ಮಡಿಚಿದ ವೃತ್ತಪತ್ರಿಕೆಯಿಂದ ಮುಖವನ್ನು ಹಗೂರಾಗಿ ಬೀಸಿಕೊಂಡು ಅರವಾಮುದು ಬಾಲುವನ್ನು ಕನಿಕರದಿಂದ ನೋಡುತ್ತಾ ಹೇಳಿದ.

"ಏನಂತಲೆ! ಬೊಂಬಾಯಿನ ಅಣುವಿಜ್ಞಾನದ ಮಂದಿರಕ್ಕೆ ಈ ವರ್ಷ ೫ ಕೋಟಿ ಖರ್ಚುಮಾಡಿದರೆ, ಮುಂದಿನ ವರ್ಷ ಅಲ್ಲಿಂದ ಭರಟ್ನೀಕ್-ಚಂದ್ರ ಉದಯಿಸಲು ಸಾಧ್ಯವೆಂದು ನನಗೆ ಖಂಡಿತವಾಗಿ ತಿಳಿದುಬಂದಿದೆ. ಕಾರಣ ಕಾಶ್ಮೀರದ ಖರ್ಚು, ಮುಂದ್ರಾ ವ್ಯಾಪಾರ, ಹೊಸ ರಾಯಭಾರಿಸ್ಥಾನಗಳ ಅಲಂಕಾರ, ವಾರ್ಷಿಕ ಕಾಂಗ್ರೇಸ್ ಅಧಿವೇಶನ ಇಂತಹ ನಾಲ್ಕಾರು ಖರ್ಚುಗಳನ್ನು ಎರಡು ವರ್ಷ ತುಂಡುಹಾಕಿ" ಎಂದು ಹೇಳಿ ಹುಬ್ಬಿನ ತುದಿಯನ್ನೇ ತಿರುಚಿದ ಅರವಾಮುದು ಅವನಿಗೆ ಈಗ ವಿಶಾಶೆ ಇಲ್ಲ.

"ನಿಂಗೆ ಹೇಗೆ ಈ ವಿಷಯ ಸಾಧ್ಯ ಎಂದು ಗೊತ್ತು" ಎಂದು ಬಾಲು ತಿರುಗಿ ಪ್ರಶ್ನೆ ಕೇಳಿದ.

"ನನ್ನ ಸೋದರಳಿಯ ಅಲ್ಲಿ ಕೆಲಸಕ್ಕೆ ಸೇರಿದ್ದಾನೆ. ಆಗಲೇ ಎರಡು ತಿಂಗಳಾಯ್ತು. ಅವನಿಗೆ ಅಲ್ಲಿನ ಕೆಲಸ ಎಲ್ಲಾ ಕರತಲಾಮಲಕ ಆಗಿದೆ. ಅವನೇ ಖುದ್ದು ನನಗೆ ಹೇಳಿದ" ಎಂದು ಅರವಾಮುದು ಸ್ಪಷ್ಟೀಕರಿಸಿದ. ಆಗ ನನ್ನ ಹಿಂದೆ ನಿಂತಿದ್ದಾತ "ಅರವಾಮುದು ಇವತ್ತಿನ ತಾರೀಖೆಷ್ಟು" ಎಂದ. ಹಿಂತಿರುಗಿ ನೋಡಿದೆ. ಯಾವ ಮಾಯದಲ್ಲೋ ಕೊರವ ಬಂದು ನಿಂತಿದ್ದಾನೆ.

"ಮರೆತುಹೋಗಿದೆ ಕಣೋ" ಎಂದ ಅರವಾಮುದು,

"ಕೈಲಿ ಪತ್ರಿಕೆ ಇದೆಯಲ್ಲೋ ನೋಡಿ ಹೇಳೋ" ಅಂದ ಕೊರವ.

"ಪ್ರಯೋಜನವಿಲ್ಲ ಅದು ನಿನ್ನೆಯದು" ಎಂದ ಅರವಾಮುದು.

"ಇವನೇ ಭರಟ್ನೇಕ್ ಹಾರಿಸೋ ಗಂಡು" ಎಂದು ಕೊರವ ಹೇಳಿ ಬಾರ್ ಕಡೆಗೆ ಹೊರಟೇಬಿಟ್ಟ.

* * *

ಜಟ್ಕಾಗಾಡಿ ಹೊಸಾಹೊಸ ಮೋಟಾರಿಗೆ, ಶಾಂತಿ ನಗರದ ಹೆದ್ದಾರಿಯಲ್ಲಿ ಡಿಕ್ಕಿ ಹೊಡೆದಾಗ, ಕಾರು ಪುಡಿಪುಡಿಯಾಯ್ತು ಎಂತ ನೀವು ಮೊನ್ನೆ ಅಲ್ಲವೆ ಪೇಪರಿನಲ್ಲಿ ಓದಿದ್ದು. ಆ ದಿನ ಸಂಜೆ ಅದೇ ಹೊತ್ತಿನಲ್ಲಿ ನಮ್ಮ ಕ್ಲಬ್ಬಿನ ವಾಚನಾ ಕೊಠಡಿಯಲ್ಲಿ ಸಾಮಿ ಒಂದು ಕಾಗದ ಓದಿ ಹತ್ತಿರಿದ್ದವರನ್ನೆಲ್ಲಾ ಬಿಕ್ಕಿಬಿಕ್ಕಿ ನಗಿಸಿದ. ಎಲ್ಲರೂ ಇನ್ನೂ ನಗುತ್ತಿರುವಾಗ ಕೊರವ ಅಲ್ಲಿಗೆ ಬಂದ. ಏನ್ರೋ ಅದು? ಅಂದ ನಾವೆಲ್ಲಾ ಸಾಮಿಯಾನ ತೋರಿಸಿದೆವು. ಸಾಮಿ ಕುಲುಕುಲುಕುತ್ತ ಕೈಲಿದ್ದ ಕಾಗದ ತೋರಿಸಿದ. 'ಓದೋ' ಅಂದ ಕೊರವ. ಸಾಮಿ ಇನ್ನೂ ನಗುತ್ತಲೇ ಇದ್ದ. ನಾನೇ ಓದ್ತೀನಿ ಕೊಡೋ ಎಂದ ಕೊರವ. ಆಗ ಘಾಬರಿಯಾಗಿ ಸಾಮಿ ತಾನೇ ಇನ್ನೊಂದು ಸಲ ಓದಿದ "ಪ್ರಧಾನ ಸಚಿವರಿಗೆ ನಮಸ್ಕಾರಗಳು. ನಾಳೆಯಿಂದ ನಾನು ರಿಟೈರ್ ಆಗಲು ತಾವು ಹುಕುಂ ಹೊರಡಿಸಿದ್ದೀರಿ. ಶಿರಸಾವಹಿಸಿದ್ದೇನೆ. ಆದರೆ ನಿಮ್ಮ ಘನ ಸರ್ಕಾರದಿಂದ ಒಂದು ಔದಾರ್ಯ ನನಗೆ ತೋರಿಸಬೇಕು. ಇದರಿಂದ ಘನ ಸರ್ಕಾರಕ್ಕೆ ಒಂದು ಕಾಸೂ ಖರ್ಚಾಗುವುದಿಲ್ಲ. ಬದಲು ನನ್ನ ಪೆನ್ಷನ್ನಿನಲ್ಲಿ ತಾವೇ ತಿಂಗಳಿಗೆ ಐದು ರೂಪಾಯಿ ಹಿಡಕೊಂಡರೂ ಪರವಾಗಿಲ್ಲ. ಮೂವತ್ತು ವರ್ಷ ಚಾಕರಿ ಮಾಡಿದ್ದೇನೆ ರಜಾ ದಿನ, ಭಾನುವಾರ ದಿನ ಮಧ್ಯಾಹ್ನ ಮನೇಲಿ ಉಂಡು ಮಲಗೋಣ ಎಂದು ಅಷ್ಟೂ ದಿವಸ ಪ್ರಯತ್ನ ಪಟ್ಟಿದ್ದೇನೆ. ಅರ್ಧ ಗಂಟೆ ಹೊರಳಾಡಿ ನಿದ್ರೆಬಾರದೆ ಕಡೆಗೆ ಕಛೇರಿಗೆ ಬಟ್ಟೆ

ಹಾಕಿಕೊಂಡು ಹೋಗಿ, ನಾನೇ ನನ್ನ ಕೊಠಡಿ ಬಾಗಿಲು ತೆಗೆದು ಕುರ್ಚಿ ಮೇಲೆ ಕುಳಿತು, ಮೇಜಿನ ಮೇಲೆ ಕಾಲೆಳೆದು ಕೂತ ಕೂಡಲೆ, ನಿದ್ರೆ ಘಾಡವಾಗಿ ಬರುತ್ತಿತ್ತು. ಅಲ್ಲಿನ ಗಡಿಯಾರ ೨-೩-೪ ಹೊಡೆದುಕೊಂಡರೂ ಎಚ್ಚರವಾಗುತ್ತಿರಲಿಲ್ಲ. ಐದು ಸಾರಿ ಹೊಡೆದಾಗ ಎಚ್ಚರವಾಗುತ್ತಿತ್ತು. ನನ್ನ ದೇಹಸ್ಥಿತಿ ಈಗಲೂ ಪ್ರಾಯ ದಿಂದಲೇ ಇದೆ.

ನಾಳೆಯಿಂದ ಮಧ್ಯಾಹ್ನ ಮನೇಲಿ ಎಚ್ಚರವಾಗಿರೋದು ಬಲು ಕಷ್ಟ ಆದ್ದ ರಿಂದ ಖಾವಂದರು ದಯಮಾಡಿ ದಿನಾಲೂ ನನ್ನ ಕೊಠಡಿ ಮೂಲೆಯಲ್ಲಿ ನನ್ನದೇ ಒಂದು ಕುರ್ಚಿ ಹಾಕ್ಕೊಂಡು ನಾನು ಕೂತು ನಿದ್ರಿಸಲು ಅವಕಾಶ ಮಾಡಿಕೊಡ ಬೇಕು. ನನ್ನ ಕೆಲಸಕ್ಕೆ ಬಂದಿರುವ ಆಫೀಸರು ಆಗಬಹುದು ಎಂದಿದ್ದಾರೆ. ತಮ್ಮ ಕರುಣಾಪೂರಿತ ಒಪ್ಪಿಗೆಗೆ ಚಕೋರನಂತೆ ಕಾದಿರುವ,

ಇತಿ,

ತಿರುಗಿ ಎಲ್ಲರೂ ನಕ್ಕರು, ಸಾಮಿ ಬಿಕ್ಕಿ ಬಿಕ್ಕಿ ನಗುತ್ತಲೇ ಇಧಾನೆ.

"ನಿನಗೆ ನಾಳೆಯಿಂದ ರಿಟೈರು ಅಂತ ಯಾರೋ ಹೇಳಿದ್ದರು ಅಲ್ಲವೇನೋ ಸಾಮಿ," ಅಂತ ಕೇಳಿದ ಕೊರವ.

"ಆ್ಞ—ನಿನಗ್ಹೇಗೆ ಗೊತ್ತು" ಎಂದು ಸಾಮಿ ತಡಪಡುಗುಟ್ಟಿ ಕೇಳಿದ.

—ಎಲ್ಲರೂ ನಗು ನಿಲ್ಲಿಸಿದರು. ಆಗ ಕೊರವ ನಕ್ಕ.

* * *

"ನಂಬಿ ಕೆಟ್ಟವರಿಲ್ಲ—ಗೋವಿಂದ" ಅಂದ ವಿಠಲ.

"ರಷ್ಯನ್ನರಿಗೂ ಅಮೇರಿಕನರಿಗೂ, ಪರಸ್ಪರ ನಂಬಿಕೆ ಮಾತ್ರ ಇದ್ದಿದ್ದರೆ, ಲೋಕದ ಜೀವನದ ಛಾಯೆಯೇ ಬೇರೆ ತರಹ ಇರುತ್ತಿತ್ತು" ಎಂದ ರಾಜು. "ಆಗ ಟಿಟಿಕೆ ಬಯಸಿದಷ್ಟು ಭಂಡವಾಳ ಅಮೆರಿಕಾದಿಂದ ನಮಗೆ ದೊರೆಯುತ್ತಿತ್ತು" ಎಂದ ಕುಮಾರು. ಹೊಸದಾಗಿ ನಮ್ಮೂರಿಗೆ ವರ್ಗವಾಗಿ ಬಂದಿದ್ದ ಐ.ಎ ಎಸ್. ಅಧಿಕಾರಿ ಅವ. ಜನಾಂಗ ಜನಾಂಗಗಳಲ್ಲಿ ಪರಸ್ಪರ ನಂಬಿಕೆ, ಜನ ಜನರಲ್ಲಿ ಪರಸ್ಪರ ನಂಬಿಕೆ ಜನಾನಾದಲ್ಲೂ ಕೂಡ ನಂಬಿಕೆ ಇದ್ದರೆ ನೋಡಿ, ಲೋಕಜೀವನ ಹಿತಕರ, ದೇಶ ಜೀವನ ಸುಖಕರ, ಸಂಸಾರ ಜೀವನ ಆನಂದಕರ" ಅಂದ ಅರವಾಮುದ್ದು.

ಕಾಡಹರಟೇಗೆ ಅಂತ ಕ್ಲಬ್ಬಿಗೆ ಹೋಗೋದು. ನಾಲ್ಕಾರು ಜನ ತಿಳಿದವರ ವಿಚಾರ ಅಪವಾದ ಹೊರಿಸುವುದಕ್ಕೋಸ್ಕರ. ತಿಳಿಯದೆ ಇದ್ದವರು ಬಾಳಿನಲ್ಲಿ

ಬದುಕಿ ಯಶಸ್ವಿಯಾದರೆ ಅವರ ಮೇಲೆ ಕುಂದು ಕೊರತೆ, ಲೋಪ ನ್ಯೂನತೆಗಳನ್ನು ಹೊರಿಸಿ, ಮಾತನಾಡಿ ನಾವು ಹಿಗ್ಗುವುದಕ್ಕೇ ಕ್ಲಬ್ಬಿಗೆ ಹೋಗುವುದು

ಸಂಕ್ರಾಂತಿ ಸಾಯಂಕಾಲ, ಎಳ್ಳು ತಿಂದು ಪೈತ್ಯ ಇದ್ದಿರಬಹುದು. ಆದರೂ ಆ ಸಂಜೆ ಈ ರೀತಿ, ನಂಬಿಕೆ ವಿಶ್ವಾಸ, ವೇದಾಂತ ಇನ್ನೆಲ್ಲಾ ನಮ್ಮ ಕ್ಲಬ್ಬಿನಲ್ಲಿ ಶುರುವಾದರೆ ನಮ್ಮ ಗತಿ? ಮನೇಲೇ ಇರಬಹುದಲ್ಲ ಈ ಸೌಭಾಗ್ಯಕ್ಕೆ ಎನ್ನಿಸುತ್ತಿತ್ತು. ಅದೂ ಅಲ್ಪಮತಿ ಅರವಾಮುದ್ದುವೇ ಈ ರೀತಿ ಅನ್ನಲಿಕ್ಕೆ ಆರಂಭಿಸಿದರೆ, ದೇವರೇ ಗತಿ ಎಂದಂದುಕೊಂಡೆ.

ಹಾಗೆ ನಂಬಿಕೆ ಜೀವನ ನಡೆಸುವುದರಿಂದಲೇ ನಾನು ಸುಖವಾಗಿದ್ದೇನೆ. ನನ್ನ ಹಾಗೆ ನೀವೆಲ್ಲಾ ನಗುತ ನಗುತ ಇರಬಾರದೇನ್ರೋ! ಸುಮ್ಮಗೆ ಅದೂ ಇದು ಸಿಕ್ಕಾಪಟ್ಟೆ. ತಾಪತ್ರಯಪಟ್ಟು ನರಳ್ತೀರಲ್ಲೋ! ಎಂದು ಮುಂದುವರೆದ ಅರವಾಮುದ್ದು.

"ನಿನ್ನ ಕೊಠಡಿಯಲ್ಲಿ ತೂಗು ದೀಪ ಮಧ್ಯೆ ಇದೆಯಲ್ಲವೇ" ಎಂದು ಕೊರವ ಅವನನ್ನು ಕೇಳಿದ.

"ಹ್ಞೂ! ನಿನಗೆ ಹೇಗೆ ಗೊತ್ತು— ಅಂದಹಾಗೆ ಎಲ್ಲಾ ಕೊಠಡಿಗಳಲ್ಲೂ ಹಾಗೇ ಅಲ್ಲವೇ" ಎಂದ ಅರವಾಮುದ್ದು.

"ಮೊನ್ನೆ ರಾತ್ರಿ ನಾನು ಮನೆಗೆ ಹೋಗುವಾಗ, ನಿಮ್ಮ ಕೊಠಡಿ ಗಾಜಿನ ಕಿಟಕಿ ಮೇಲೆ ದಂಪತಿಗಳ ನೆರಳು ಬಿದ್ದಿತ್ತು, ಅದಕ್ಕೇ ಕೇಳಿದೆ" ಎಂದ ಕೊರವ.

ಅರವಾಮುದ್ದು ನಗಲಾರಂಭಿಸಿದ—"ಅಯ್ಯೋ! ಮಂಕೆ! ನಾನು ಮೊನ್ನೆ ಊರಿನಲ್ಲೇ ಇತ್ತಿಲ್ಲವಲ್ಲೋ" ಎಂದು ಕೇಕೇ ಹಾಕಿ ನಕ್ಕ.

ಕೊರವ ಸುಮ್ಮಗಿದ್ದ —ನಾವೆಲ್ಲಾ ತಣ್ಣಗಿದ್ದೆವು —ಅರವಾಮುದ್ದು ನಗುತ್ತಲೇ ಇದ್ದ.

"ನಂಬಿ ಕೆಟ್ಟವರಿಲ್ಲ—ಗೋವಿಂದ" ಎಂದು ತಿರುಗಿ ವಿಠ್ಠಲ ಹೇಳಿದ.

* * *

ಸೊನ್ನೆ

ಕ್ಷಣ, ಕ್ಷಣ, ಪ್ರದಕ್ಷಿಣ
ಕ್ಷಿಪಣಿ ಮೂರ ನೆಗೆದು ಹಾರಿ
ಗಗನದಾಳ ಸಿಡಿದು ತೂರಿ
ವಿಜ್ಞಾನಿಯ ಚೇತೋಹಾರಿ
ಏರಿ ಏರಿ ಶುನಕನಾರಿ
ದ್ವೇಷ ಹೊಟ್ಟೆ ಉರಿಯಕಾರಿ
ಭೂಗೋಳದ ಗೋಳನೆಲ್ಲ
ತನ್ನ ಕಡೆಗೇ ಸೆಳೆದಳು

ಗಿರಿ ಅರಣ್ಯ ಕಾಡು ನಾಡು
ಕುರಿಯಮಂದೆ ಬೆದರಿ ನಡುಗೆ
ಅಗೊ ಅಲ್ಲಿ, ಇಗೊ ಇಲ್ಲಿ
ಹೆಣ್ಣುನಾಯಿ ಡೊಂಕುಬಾಲ
ಎಷ್ಟು ಸೊಟ್ಟು ತೂಗಿರಿ,
ಓಕೆ! ಓಕೆ! ಕೇಳಿರಿ
ಕೊನೆಯ ವಿಷದ ಗುಟುಕನಗೊ
ನುಂಗುತಿದೆ ಆ ನಾಯಕಿ!

ಅಸುರ ಋಷಿಯ ತಪದ ಫಲ
ಶುನಕಿ ಚಂದ್ರನೆಡೆಗೆ ಗಮನ
ಸುರ ಋಷಿಯ ತಪದ ಫಲ
ನಾಳೆ ಮಂಗ ನಾಕಗಮನ!
ಶ್ವಭ್ಯಃ ಶ್ವಪತಿಭ್ಯಶ್ಚ
ನಮೋನಮಃ ನಮೋನಮಃ
ಶುನಕಿ ಬಾಲ ಕೆಳಗೆ ಇಳಿ
ಕತ್ತಿ ಮಸೆವ ಗದ್ದಲ!
ಕ್ಷಣ, ಕ್ಷಣ, ಪ್ರದಕ್ಷಿಣ!
ಭಕ್ತೆ ಶುನಕಿ ಬಳಸಿ ಬರಲು
ನಡುವೆ ಭುವಿಗೇ ಕಂಟಕ
ಆಚೆ ನಾಳೆ ನೆಲ, ಜಲ,—
ಉರಿದು ಸಿಡಿದು ಸೊನ್ನೆಯೆ!

— ಶ್ರೀನಿವಾಸಂ.

ಅಪ್ಪನ ರಿಪಬ್ಲಿಕ್ ದಿನಾಚರಣೆ

ನಮ್ಮಪ್ಪನಿಗೆ ರಿಪಬ್ಲಿಕ್ ದಿನದ ಆಚರಣೆಯನ್ನು ಸಾರ್ಥಕ ರೀತಿಯಲ್ಲಿ ನಡೆಸಬೇಕು ಎಂಬ ಹಂಬಲ. ಮನೆಯವರನ್ನೆಲ್ಲಾ ಕರೆದುಕೊಂಡು ಹೋಗಿ ಸಾರ್ವಜನಿಕ ಸಭೆಯಲ್ಲಿ ನಾಯಕರೆದುರಿಗೆ, ಭಾರತಮಾತೆಯ ಸೇವೆಗೆ ಕಂಕಣಬದ್ಧನಾಗಿದ್ದೇನೆಂದು ಪ್ರತಿಜ್ಞೆಮಾಡಬೇಕು ಎಂದೇ ಹಿರಿಯ ಆಶೆ. ಆದರೆ ಅಷ್ಟು ಜನ ನೆರೆ ಸರಿಯೋರು ಬರೋ ಸಭೆಗೆ ಲಕ್ಷಣವಾಗಿ ಹೊಸ ಸೀರೆ ಉಟ್ಕೊಂಡು ಹೋಗಬೇಕೇ ಹೊರತು, ಹಳೇ ಸೀರೇಲಿ ನಾನು ಬರೋದೇ ಇಲ್ಲ ಅಂತ ಅಮ್ಮ ಹಠಹಿಡಿದಳು. ಅಮ್ಮ ಹಾಗಂದ ಮೇಲೆ ಅಕ್ಕನೂ ದನಿ ಸೇರಿಸಿದಳು ಆಗ ಅಪ್ಪ ಸ್ವಲ್ಪ ಯೋಚನೆಮಾಡಿ ಈ ರೀತಿ ತೀರ್ಮಾನಿಸಿದ. ಭಾರತದ ಸೇವೆಗೆ ಸಾರ್ವಜನಿಕವಾಗಿಯೇ ಪ್ರತಿಜ್ಞೆ ತೆಗೆದುಕೊಳ್ಳಬೇಕಾಗಿಲ್ಲ. ನಮ್ಮ ಸಂಸಾರದವರೆಲ್ಲಾ ಆ ದಿನ ಬೆಳಗ್ಗೆ ಎದ್ದು ಅಭ್ಯಂಗನ ಸ್ನಾನಮಾಡಿ, ಊಟ ತಿಂಡಿಗಳನ್ನೆಲ್ಲಾ ಬುತ್ತಿ ಕಟ್ಟಿಕೊಂಡು, ಊರಾಚೆ ಸ್ವಲ್ಪ ದೂರ ಹೋಗಿ ನೆರಳಿರುವ ಕಡೆ ವನಭೋಜನಮಾಡಿ ಅಲ್ಲಿಯೇ ದೇಶಸೇವೆಯ ಪ್ರತಿಜ್ಞೆಮಾಡೋಣ ಎಂದು. ಊರಾಚೆ ಹೋದರೆ ಅಂಚಹಳ್ಳಿ ಮೇಲೇ ಹಾದು ಹೋಗಬೇಕು. ಹಳ್ಳಿಯವರೆಲ್ಲಾ ಹೊಸಾಹೊಸ ಪಂಚೆ ಸೀರೆ ಉಟ್ಟು ಹಬ್ಬ ಆಚರಿಸುತ್ತಿರುತ್ತಾರೆ. ನಮ್ಮನೆಗೆ ಹಾಲು ಮೊಸರು ತರುವವರೆಲ್ಲಾ ಆ ಹಳ್ಳಿಯಿಂದಲೇ ಬರೋರು. ಅವರೆದುರಿಗೆ ಹೀಗೆ ಹೋಗುಕ್ಕೆ ನನ್ನಿಂದ ಸಾಧ್ಯವಿಲ್ಲ ಅಂತ ಅಮ್ಮ ಖಡಾಖಂಡಿತವಾಗಿ, ಕಂಚಿನ ಕಂಠದಿಂದ ಕುಕ್ಕೇಬಿಟ್ಟಳು. ಅಷ್ಟಕ್ಕೇ ಅಪ್ಪ ಸುಸ್ತಾಗೋ ಜಾತಿಯಲ್ಲ. ತಿರುಗಿ ಎರಡು ನಿಮಿಷ ಯೋಚನೆಮಾಡಿದ. ಹೆದ್ದಾರೀಲಿ ಹೋದರೆ ಹಳ್ಳಿಯ ಮುಂದೆ ಹೋಗಬೇಕು. ಅಡ್ಡದಾರಿ ಹಿಡಿದು ತೊರೆ ಹತ್ತಿರಕ್ಕೆ ಹೋಗೋಣ. ಭಾರತದ ಬೆನ್ನುಮೂಳೆ ಎಂದರೆ ಜಮೀನು, ತೊರೆ. ಅಲ್ಲಿಗೆ ಹೋಗಿ ಪ್ರತಿಜ್ಞೆಮಾಡೋಣ ಎಂದ. ಅಮ್ಮ ಈ ಸಾರಿ ಹ್ಞೂ ಎಂದಳು. ಆ ಬೆಳಗ್ಗೇನೆ ಪಕ್ಕದ ಮನೆ ಪಾತಮ್ಮ ಹೇಳಿದ್ದರು ಅವರ ಮನೆಯವರು ಆ ಹಳ್ಳಿ ಮಾರ್ಗವಾಗಿ ವನ ಭೋಜನಕ್ಕೆ ಹೋಗುತ್ತಾರೆ ಅಂತ. ಆ ದಾರಿ ತಪ್ಪಿದರೆ ಸಾಕಿತ್ತು ಅಮ್ಮನಿಗೆ.

ಪಂಚಗಂಟೆ ಪ್ಲಾನ್ ಪ್ರಕಾರ ಬೆಳಗ್ಗೆ ೯—೯-೩೦ ಗಂಟೆಗೆ ಮನೆ ಬಿಟ್ಟು ಹೊರಟೆವು. ನಾನು, ಅಕ್ಕ, ಅಪ್ಪ, ಅಮ್ಮ, ನನ್ನ ತಮ್ಮ, ನಮ್ಮ ಜಾನಿ ನಾಯಿ.

ಇಷ್ಟು ಜನದಲ್ಲಿ ಧೃಡವಾಗಿ ಬೆಳೆದು ಅಘೋರವಾಗಿ ಕಾಣುತ್ತಿದ್ದ ವ್ಯಕ್ತಿ ಜಾನಿ. ಅದೊಂದು ಸಂಸಾರದಲ್ಲಿದ್ದರೂ, ಸಂಸಾರದ ಸೋಂಕು ಕೂಡ ಅದಕ್ಕಿತ್ತಿಲ್ಲ. ನಿರ್ಯೋಚನೆಯಿಂದ, ಸಿಕ್ಕಿದ್ದನ್ನುಂಡು, ಜಯ್ ದತ್ತಾತ್ರೇಯ ಎಂದು ನಿರ್ಲಿಪ್ತ ಬಾಳನ್ನು ನಮ್ಮನೆಯಲ್ಲಿ ನಡೆಸುತ್ತಿತ್ತು. ಅದಕ್ಕೆ ತಕ್ಕ ಯಜಮಾನ ನಮ್ಮ ಅಪ್ಪ ಹುಮ್ಮಸ್ಸು ಹೆಚ್ಚು, ಆದರೆ ಭಾರದ ಪ್ರಯುಕ್ತ ದಮ್ಮು ಹೆಚ್ಚು—ಜಾನಿ, ಅಪ್ಪ, ಅಕ್ಕ, ಅಮ್ಮ, ತಮ್ಮ, ನಾನು ಈ ರೀತಿ ಮೆರವಣಿಗೆ ಹೋಗುತ್ತಿದ್ದಾಗ ಹಿಂದೆ ಇದ್ದ ನನಗೆ ಬುಸು ಬುಸು ಕೇಳಿಸಿದಾಗ ಮೊದಲು ಓಹೋ ಹಾವು ಎಂದು ಹೆದರಿದ್ದೆ. ಆದರೆ ಅಪ್ಪ ಉಸಿರುಬಿಡುತ್ತಿರೋದು ಆ ರೀತಿ ಅಂತ ತಿಳಿದ ಮೇಲೆ ಅಯ್ಯೋ! ಎನ್ನಿಸಿ, ಧೈರ್ಯ ಬಂತು.

ಅಷ್ಟರಲ್ಲೇ ಒಂದು ಬೇಲಿ ಅಡ್ಡಬಂತು. ಬೇಲೀನ ಭೇದಿಸಿಕೊಂಡು ಜಾನಿ ಆಕಡೆ ಹೋಗಿ ನಿಂತುಕೊಂಡಿತು. ಅಪ್ಪನಿಗೆ ಆ ರೀತಿ ಮಾಡಲು ಸಾಧ್ಯವಾಗಲಿಲ್ಲ. ಎರಡೇ ಅಡಿ ಎತ್ತರ ಇದೆ ಬೇಲಿ. ಈ ಹೆಂಟೆ ಮೇಲೆ ಒಂದು ಕಾಲಿಟ್ಟು ಧುಂಗಿದರೆ, ಆ ಕಡೆಗೆ ಹೋಗಬಹುದು ಎಂದು ನನ್ನ ತಮ್ಮ ಹೇಳಿ, ಅದೇ ರೀತಿ ಪ್ರಯೋಗ ನಡೆಸಿ ತೋರಿಸಿದ ನಂತರ ಹೆಂಟೆ ಮೇಲೆ ಅಪ್ಪ ಒಂದು ಪಾದ ಇಟ್ಟರು. ಹೆಂಟೆ ಪುಡಿಪುಡಿಯಾಗಿ ಕೆಮ್ಮಣ್ಣಿನ ಹದಕ್ಕೆ ಬಂತು. ಅಕ್ಕ ಆ ವೇಳೆಗೆ ಹತ್ತಿರದಲ್ಲಿ ಕಂಡ ಕಲ್ಲೊಂದನ್ನು ತೋರಿಸಿದಳು. ನಾನೂ ಅಮ್ಮ ಅದನ್ನು ಉರುಳಿಸಿ ಬೇಲಿ ಹತ್ತಿರ ತಂದೆವು. ತಂದೆ ಒಂದು ಪಾದ ಅದರ ಮೇಲಿಟ್ಟರು. ನಾವು ನಾಲ್ಕು ಜನರು ಅಪ್ಪನ ನಾಲ್ಕು ಕಡೆ ಹಿಡಿದು ಅವರು ಧುಂಗಿಸುವ ವೇಳೆಗೆ ಉಮ್ಮಕ್ಕುಕೊಟ್ಟು ನೂಕಿದೆವು. ಬೇಲಿ ದಾಟಿ ಆಚೆಕಡೆ ಕೆಕರನ ಹಾಗೆ ನೋಡುತ್ತಾ ನಿಂತಿದ್ದ ಜಾನಿ ಮೇಲೆ ಬಿದ್ದರು. ಶುದ್ಧ ನಾಯಿ! ಅಪ್ಪ ಹಾರಿ ಬರೋ ಹೊತ್ತಿಗೆ ಓಡಿಹೋಗ ಬಾರದೆ? ಏನೋ ಅಚಾತುರ್ಯ! ನೋಡೇಬಿಡೋಣ ಅಂತ ಬಾಲ ಸುರುಳಿ ಎತ್ತಿ ಹಿಂಗಾಲ ಮೇಲೆ ಕೂತುಕೊಂಡು ಕಣ್ಣಿವೆ ಹಾರಿಸದೆ ನೋಡ್ತಾನೆ ಇದೆ! ತಕ್ಕ ಶಾಸ್ತಿ ಆಯಿತು!

ಆಗ ಜಾನಿ ಒಂದು ಕುಯ್ಯೋ! ಕೂಗ್ಹಾಕಿತು. ತೀವ್ರ ಮಂಧರದಲ್ಲಿ ಶುರು ವಾಗಿ, ಅತೀವ್ರ ಕನಿಕರಕ್ಕೆ ಬಂದು, ಕುಂಯ್ ಎಂದು ಮೂರು ಬಾರಿ ಸಂಕೇತ ಕೊಟ್ಟಾಗ, ಭೂಮ್ಯಾಕಾಶಗಳಿಗೂ ಆ ಕೂಗು ಕೇಳಿಸಿರಬೇಕು. "ಬೀಪ್" ಕೂಡ ಅಷ್ಟು ಹೆದರಿಕೆ ಹುಟ್ಟಿಸಿರಲಾರದು. ಹಾಗಿತ್ತು ಆ ಕುಂಯ್ ಗೋಳ್.

"ಯಾವನೋ ಅದು" ಅಂತ ಕೂಗಿನ ಹಿಂದೆಯೇ ಇಬ್ಬರು ರೈತಬಾಂಧವರು ಮೂರು ಸೀಳು ನಾಯಿಯ ಜತೆ ಓಡಿಬಂದರು ದೊಣ್ಣೆಪಾಣಿಗಳಾಗಿ, ಕುಡುಗೋಲು ಸೊಂಟದಲ್ಲಿಟ್ಟುಕೊಂಡು ಬಂದಿದ್ದರು.

ಆ ಸೀಳು ನಾಯಿಗಳನ್ನು ನೋಡುತ್ತಲೇ ಜಾನಿ, ಅಪ್ಪನ ಕಾಲುಗಳ ಮಧ್ಯೆ ದೇಹವನ್ನೆಲ್ಲಾ ದೊಡ್ಡ ಮನುಷ್ಯರ ಅಳಿಯನಂತೆ ಸಂಕುಚಿತಪಡಿಸಿಕೊಂಡು ಕೂತು ಕೊಂಡಿತು.

ನಾನು ಹಾರಿಹೋಗಿ ಅಪ್ಪನ ಕಾವಲಿಗೆ ನಿಂತೆ. ರೈತ ಬಾಂಧವರು ಕೇಳಿದರು, "ಎಲಲಾ! ಏನಾಯ್ತ್ರಾ! ಮುಳ್ಳು ಹಂದಿ ಇಲ್ಲಿ ಬಂದೈತೆ ನಾಯ್ನ ಮೇಗೆ ಬಿದ್ದೈತೆ ಅಂತ್ಲೇ ಧೌಡು ಬಂದ್ವಿ—" ಎಂದರು.

ವನಭೋಜನದ ವಿಚಾರ ಎಲ್ಲಾ ಹೇಳಿದೆವು. ಅಪ್ಪನೂ ಎದ್ದಿದ್ದರು. ಕೋಳಿ ಕೂಗು ಕೇಳೋದೂರದಲ್ಲಿ ತೊರೆ ಐತೆ. ಅಂತ ದಾರಿ ಹೇಳಿದರು. ಅಪ್ಪ ಆಗ ಕೇಳಿದ, ಮುಳ್ಳುಹಂದಿ ಅಲ್ಲಿ ಇರಬಹುದಾ ಎಂದು.

"ನೀರು ಕುಡೀಲಿಕ್ಕೆ ಹೋಗಿರಬಹುದು ಅಣ್ಣಾ" ಅಂತ ತಮ್ಮ ಹೇಳಿದ.

"ನಡೆಯುಕ್ಕಾದರೆ ಮನೆಗೇ ಹೋಗೋಣ ಅಂದ್ರೆ ಅಲ್ಲೆ ಅಂಗಳದಲ್ಲಿ ಆಕಾಶದ ಕೆಳಗೇ ಪ್ರತಿಜ್ಞೆ ಮಾಡಿದರಾಯ್ತು" ಅಂದಳು ಅಮ್ಮ.

ಮುಳ್ಳುಹಂದೀನ ನಾನು ನೋಡೆ ಇಲ್ಲ. ನೋಡೋಣಾಮ್ಮಾ" ಎಂದಳು ಅಕ್ಕ.

"ಹೇಗೇನಿರುತ್ತೇ! ಅಪ್ಪ ಕ್ಷೌರ ಮಾಡಿಕೊಳ್ಳದೇ ಇದ್ದರೆ ಹೇಗಿರುತ್ತೋ ಹಾಗೇ ಇರುತ್ತೆ ಅದನ್ನೇನು ನೋಡೋದು" ಎರದು ಬಿರಿನುಡಿದಳು ಅಮ್ಮ.

ಆ ವೇಳೆಗೆ ಸೀಳು ನಾಯಿಗಳು ರೈತ ಬಾಂಧವರು ತೋರಿದ ಕಡೆಗೆ ಓಡಲು ಶುರು ಹಚ್ಚಿದುವು. ಅಲ್ಲೇ ಇರಬೇಕಲ್ಲಾ ಅಂತ ಅವರೂ ಓಡಿದರು

ನೀವು ನಂಬಿದರೂ ನಂಬಿ, ಬಿಟ್ಟರೂ ಬಿಡಿ, ಆದರೆ ಅಪ್ಪ ಬೇಲಿಯಿಂದ ಈ ಕಡೆಗೆ ಒಮ್ಮೆಲೇ ಧುಂಗಿದ. ಬನ್ನಿ ಬನ್ನಿ ಮನೆಗೇಹೋಗಿ ಅಲ್ಲೇ ಅಂಗಳದ ತುಳಸೀ ಕಟ್ಟೆ ಹತ್ತಿರ ವನಭೋಜನ ಮಾಡೋಣ ಎಂದು ಓಡಿಯೇಬಿಟ್ಟ. ಅಪ್ಪ, ಅಮ್ಮ, ಜಾನಿ, ಅಕ್ಕ, ತಮ್ಮ, ನಾನು, ಈ ರೀತಿ ಓಡುಮೆರವಣಿಗೆ ಸಾಗಿತು. ಆದರೆ ಈ ಸಾರಿ ಬುಸುಬುಸುಗುಟ್ಟಿದ್ದು ನಾನು. ಅಪ್ಪು ಹುಮ್ಮಸ್ಸಿನಿಂದ ಅವರೆಲ್ಲಾ ಓಡಿದ್ದರು ಮುಂದೆ ಮುಂದೆ.

ರಿಪಬ್ಲಿಕ್ ದಿನಾಚರಣೆಯಿಂದ, ಇದ್ದ ಹಳೇಬಟ್ಟೆಗಳು ಹರಿದುಹೋಯು ಅಂತ ಅಮ್ಮ ಇನ್ನೂ ಗೊಣಗುಟ್ಟುತ್ತಲೇ ಇದಾಳೆ.

—ಕುಮಾರ್

ನನ್ನ ಸ್ಕೂಲು

ಮನೆಗೆ ಹತ್ತಿರ, ಎಂಬ ಕಾರಣದಿಂದ ಮಾತ್ರ, ನಾನು ಆ ಸ್ಕೂಲಿಗೆ ಸೇರಿದೆ.... ಅಲ್ಲಿ, ನಾನು ಏನೂ ಕಲಿಯಲಿಲ್ಲ. ಆದರೂ, ಆ ಶಾಲೆಗೆ ನಾನು ಚಿರಋಣಿ! ಅಲ್ಲಿ ನಾನು ಬಹಳ ಖುಷಿಯಾಗಿದ್ದೆ; ಗೋಡೆಮೇಲೆಲ್ಲ ನನ್ನ ಚರಿತ್ರೆಯನ್ನೇ ನನ್ನ ಸಹಪಾಠಿಗಳು ಬರೆದರು; ದಿನವೂ ನನ್ನ ವಿಷಯವಾದ ನಾಲ್ಕು ಹುಕುಮ್ಮುಗಳನ್ನು ಮುಖ್ಯೋಪಾಧ್ಯಾಯರು ಹೊರಡಿಸಿದರು. ಅಲ್ಲಿ ನಾನು ಜೀವನದ ವಿವಿಧ ಮುಖಗಳ ನಿಕಟ ಪರಿಚಯವನ್ನು ಘಳಿಸಿದೆ. ಎಂತಹ ಕಷ್ಟಬಂದರೂ ಧೈರ್ಯದಿಂದ ಎದುರಿಸುವ ಎದೆಗಾರಿಕೆಯನ್ನು ಆ ಶಾಲೆ ನನಗೆ ಕಲಿಸಿತು.

ನನ್ನ ಹೆಡ್ಮೇಷ್ಟರು, ಎಂ. ಎ., ಎನಿಸಿಕೊಂಡಿದ್ದರು. ಅಂದರೆ, ಎಂ. ಎ. ಪರೀಕ್ಷೆ ದಿನ ಅವರಿಗೆ ಜ್ವರ ಬಂದಿದ್ದರೂ, ಅನ್ಯಾಯವಾಗಿ ಆತ್ಮವಂಚನೆ ಮಾಡಬಾರದಲ್ಲಾ ಎಂಬ ಉದ್ದೇಶದಿಂದ ಅವರು ತಮ್ಮನ್ನ ತಾವೇ ಎಂ. ಎ. ಎನಿಸಿಕೊಂಡಿದ್ದರು. ತಂದೆಯ ಸ್ಥಾನಕ್ಕಿಂತ ಕಡಮೆ ಸ್ಥಾನದಲ್ಲಿರುವವರ ಹತ್ತಿರ ಅವರು ಮಾತಾಡುತ್ತಲೇ ಇರಲಿಲ್ಲ. ಅವರಿಗೆ ತಿಳಿದಿದ್ದದ್ದು, ನಾಲ್ಕೇ ನಾಲ್ಕು ವಿಷಯ.... (1) ಪ್ರಪಂಚದ ನದಿಗಳಲ್ಲಿ ಅತಿ ದೀರ್ಘವಾದ ಎಂಟು ನದಿಗಳು ಯಾವಯಾವುವು. (2) ಬೌದ್ಧ ಧರ್ಮದ ಮುಖ್ಯ ತತ್ವಗಳು ಯಾವಯಾವುವು. (3) ಎಂಟನೆಯ ಹೆನ್ರಿಯ ಹೆಂಡತಿಯರ ಹೆಸರು. (4) ಧವಳಗಿರಿ ಪರ್ವತ ಶಿಖರದ ಎತ್ತರ. ಇಷ್ಟೇ! ಅದನ್ನೇ ಅವರು ಮತ್ತೆ ಮತ್ತೆ ಹೇಳಿ ತಮ್ಮ ಪಾಠವನ್ನು ನಿರ್ವಹಿಸುತ್ತಿದ್ದರು. ಹುಡುಗರು ತಪ್ಪುಮಾಡಿದರೆ, ಅವರು ಬೆತ್ತದಿಂದ ಅವರ ಅಂಗೈ ನೀಡಿಸಿ ಡಜ಼ಗಟ್ಟಲೆ ಹೊಡೆಯುವರು. ಒಂದೊಂದು ಕೈಗೆ ಒಂದೊಂದು ಡಜ಼ ನೀಡದಿದ್ದರೆ, ಅವರಿಗೆ ತೃಪ್ತಿ ಉತ್ಪಾದನೆಯಾಗುತ್ತಿರಲಿಲ್ಲ.

ಫೀಜನ್ನು ಕ್ರಮವಾಗಿ ಕಾಲಕ್ಕೆ ಸರಿಯಾಗಿ ಕೊಡುತ್ತಾ ಇದ್ದರೆ, ಯಾವ ಹುಡುಗನನ್ನೂ ಅವರು ಡಿಸ್ಮಿಸ್ ಮಾಡುತ್ತಿರಲಿಲ್ಲ. ಅಜೀವ ವಿದ್ಯಾರ್ಥಿಗಳನೇಕರಿದ್ದರು, ಅಲ್ಲಿ. ಹೇಳಿ ಬರೆಯಿಸುವುದನ್ನೇ ಅಲ್ಲಿ ಎಲ್ಲರೂ ಉತ್ತಮ ಬೋಧನಾಕ್ರಮವೆಂದು ಪರಿಗಣಿಸಿದ್ದರು. ಮೇಷ್ಟರುಗಳು ಪ್ರತಿ ಒಬ್ಬರೂ, 'ನೋಟ್ಸು' ಬರೆಯಿಸುತ್ತಿದ್ದರೇ ಹೊರತು, ಪಾಠ ಕಲಿಸಲೇ ಇಲ್ಲ. ಮಗ್ಗಿ, ಅಂಕಗಣಿತ, ವ್ಯಾಕರಣ, ಎಲ್ಲ 'ನೋಟ್ಸು'! ಹೀಗಾಗಿ, ಆಗಿನ ಕಾಲದ ಲೋವರ್ ಸೆಕಂಡರಿ

ಪರೀಕ್ಷೆಯನ್ನು ನಮ್ಮ ಶಾಲೆಯವನು, ಒಬ್ಬನೂ ದಾಟಲಿಲ್ಲ....ಒಬ್ಬ ದಾಟಿದಾಗ ಲಂತೂ, ಇಡೀ ತಾಲ್ಲೂಕಿಗೆ ರಜಾ ಕೊಡಲಾಯಿತು !

ಭೂವಿವರಣೆ ಎಂದರೆ ಬೆಟ್ಟಗಳ ಪಟ್ಟಿ, ಚರಿತ್ರೆ ಎಂದರೆ ಕದನಗಳ ಪಟ್ಟಿ, ಅಷ್ಟೇ ನಮ್ಮ ಶಾಲೆಗೆ. ಭೂಪಟ ಕೂಡ ಶಾಲೆಯಲ್ಲಿದ್ದದ್ದು ಒಂದೇ....ಹರಕಲು, ಹಳೆಯ ಮೈಸೂರಿನದು. ಮಾಸ್ತರುಗಳೊಬ್ಬರ ಪೈಕಿ ಒಬ್ಬರು, ಹಿಂದೆ ನಾಟಕದ ಕಂಪೆನಿಯಲ್ಲಿ ಪಾರ್ಟುಮಾಡುತ್ತಿದ್ದವರಾದ್ದರಿಂದ, ಅವರು ಪಾಠಹೇಳುವುದಕ್ಕೆ ಬದಲಾಗಿ, ನಮಗೆ 'ರಾಮವರ್ಮ-ಲೀಲಾವತಿ' ಹಾಡುಗಳನ್ನೇ ಕಲಿಸುತ್ತಾ ಇದ್ದರು. 'ಈಚಲ ಮರದವ್ವ' ಎಂಬ ಹಾಡನ್ನು ಬಹಳ ಸ್ವಾರಸ್ಯವಾಗಿ ಹಾಡುವ ಕೀರ್ತಿ ನನಗೆ ಬಂದದ್ದು, ಆ ಉಪಾಧ್ಯಾಯರ ಪ್ರಯತ್ನದಿಂದಲೇ !

ಒಂದು ದಿನ ನಮ್ಮ ಶಾಲೆಗೆ ಒಬ್ಬ ಹೊಸ ಹುಡುಗ, ಬಂದ! ಯಾವ ಕ್ಲಾಸಿಗೆ ಸೇರುತ್ತಾನೆ ಅವನು, ಅಂತ ನಾವು ಚರ್ಚೆಮಾಡಿ, ಇತ್ಯರ್ಥಕ್ಕೆ ಬರುವ ಮೊದಲೇ ನಮಗೆ ತಿಳಿಯಿತು, ...ಆತ "ಸ್ಕೂಲ್ ಇನ್ಸ್ಪೆಕ್ಟರ್" ಎಂದು ! ಪಾಪ, ಆ ಹುಡುಗ ನನ್ನ ನಮ್ಮ ಹೆಡ್ಮಾಸ್ತರು ರೂಮಿಂದ ರೂಮಿಗೆ ಓಡಿಸಿಕೊಂಡೇ ಬಂದರು. ಕೊನೆಗೆ, ಅವನ ಹೊಟ್ಟೆಗೆ ಜಾಮೂನು ತುಂಬಿ, ಅವನನ್ನ ಒಂದು ಜಟಕಾದಲ್ಲಿ ಕೂರಿಸಿ ಮನೆಗೆ ಕಳುಹಿಸಿದರು.

ನಮ್ಮಪ್ಪನಿಗೆ ಬೇರೆ ಊರಿಗೆ ವರ್ಗವಾದಾದ, ನಾನೂ ಆ ಶಾಲೆ ಬಿಟ್ಟೆ.

ಒಬ್ಬರಿಗೆ ಒಂದು ಓಟು—ಎಂಬ ತತ್ವವೇ ಪ್ರಜಾಪ್ರಭುತ್ವ ಎಂಬ ಸ್ವರಾಜ್ಯದ ಅಡಿಗಲ್ಲು ! ಹೇಡಿ, ಭೀರು, ಧೀರ, ಪಂಡಿತ, ಪಾಮರ, ನರ, ವಾನರ, ಮಾನವ, ದಾನವ, ಎಲ್ಲರಿಗೂ ಇದೇ ತತ್ವ—"ಒಬ್ಬರಿಗೆ ಒಂದು ಓಟು" ಆದರೆ, ವೋಟೊಂದೇ ಮಾನವನ ಇಹಪರಗಳ ಇತ್ಯರ್ಥಕ್ಕೊದಗುತ್ತದೆಯೇನು ? ಸುಖಸಂಪತ್ತುಗಳ ಸಾಧನ ವಾದ ವೋಟು, ಒಬ್ಬರಿಗೊಂದು ಎಂದು ನಿರ್ಧರಿಸಿದರೆ, ಮುಗಿಯಿತೆ ಶಾಸನ ಸಭೆಗಳ ಕರ್ತವ್ಯ ?

ಸಂತಾನವಲ್ಲವೆ, ಇಹಪರಗಳಲ್ಲಿ ಸುಖಪ್ರಾಪ್ತಿಗೆ ಅತ್ಯವಶ್ಯಕ ? ಒಬ್ಬರಿಗೊಂದು ಓಟು, ಎಂದು ನಿರ್ಧರಿಸಿದಂತೆ, ಇಬ್ಬರಿಗೊಂದು ಕೂಸು, ಒಂದೇ ಕೂಸು ಎಂದು ನಿರ್ಧರಿಸಬೇಡವೇನು ?

ಸೃಷ್ಟಿಕರ್ತನ ಸವಿ, ನನ್ನಮಗುವನ್ನು ನಾನು ಹೊಡೆಯುತ್ತೇನೆ, ನೀನಾರು ತಡೆಯುವುದಕ್ಕೆ ಎಂಬ ಧೋರಣೆಯಿಂದಾಗುವ ಆತ್ಮಶಾಂತಿ, ಪ್ರತಿಷ್ಠೆ, ಹುಡುಗನ ಹಾವಳಿಯಿಂದಾಗುವ ಆನಂದ, ಶಿಶುವಿನ ತೊದಲು ನುಡಿ ಕೇಳುವಾಗಿನ ತಂಪು— ಇವೆಲ್ಲ ಮಾನವನ ಆಜನ್ಮಹಕ್ಕು. ಆದ್ದರಿಂದ, ಈ ಹಕ್ಕನ್ನು ಮೊಟಕುಮಾಡ

ಕೂಡದು, ಸರಿ! ಆದರೆ, ಹತ್ತಾರು ಮಕ್ಕಳನ್ನು ಹೆತ್ತು ಭೂಭಾರವನ್ನು ಹೆಚ್ಚಿಸುವು ದನ್ನೂ ನಾವು ಖಂಡಿಸದೆ ಇರಲಾರೆವು.

ಶತಮಾನಗಳಿಂದಲೂ ನಮ್ಮ ಹಿರಿಯರು ತಪ್ಪುಮಾಡುತ್ತ ಬಂದಿರುವರು, ಎಂದು ಅವರನ್ನು ದೂಷಿಸುತ್ತಾ, ನಾವು ಕೂತರೆ ಹೇಗೆ? "ಇಬ್ಬರಿಗೆ ಒಂದೇ ಮಗು" ಎಂಬ ತತ್ವಾನುಸಾರ, ಎಲ್ಲ ಕಾನೂನು ಕಟ್ಟಳೆಗಳನ್ನೂ, ಹಕ್ಕುಬಾಧ್ಯತೆಗಳನ್ನೂ ಅಳವಡಿಸಿಕೊಂಡರೆ ಮಾತ್ರ ಕ್ಷೇಮ

ಒಂದೇ ಒಂದು ಸಂತಾನಕ್ಕಿಂತ ಹೆಚ್ಚು ಪಡೆದ ದಂಪತಿಗಳಿಗೆ ವೋಟಿಲ್ಲ, ಸರ್ಕಾರದಲ್ಲೂ ಸೊಸೈಟಿಗಳಲ್ಲೂ ಸಾಲವಿಲ್ಲ, ಮಂತ್ರಿಪದವಿ ಡೆಪ್ಯೂಟಿ ಮಂತ್ರಿ ಪದವಿ ಇಲ್ಲ, ಮೊದಲನೆಯ ಮಗುವಿಲ್ಲದೆ ಉಳಿದವರಿಗೆ ಪಬ್ಲಿಕ್ ಸರ್ವಿಸಸ್ ಕಮಿಷನ್ ಇಂಟರ್‌ವ್ಯೂ ಇಲ್ಲ, ಎಂಜಿನೀರಿಂಗ್ ಕಾಲೇಜುಗಳಲ್ಲಿ ಸೀಟಿಲ್ಲ ಎಂದು ಸಾರಿಬಿಡಿ— ಕುಟುಂಬಯೋಜನೆ, ಸಂತಾನ ನಿರೋಧ ಇತ್ಯಾದಿ ಚಳುವಳಿಗಿಲ್ಲದೇನೇ, ಮುಂದಿನ ಸೆನ್‌ಸಸ್ ಹೊತ್ತಿಗೆ, ಕ್ರಾಂತಿದಾಯಕ ಫಲ ದೊರೆಯುತ್ತದೆ.

—ಕಾಮತ್.

ಮಾಜಿ ಮಂತ್ರಿ

ಮಾಜಿ ಮಂತ್ರಿಯನಿನ್ನು ಮರೆಯುವಿರ, ನೀವು?
ನಿಮ್ಮ ಕೈಹಾರ ಪರ ಕಂಠಗಳಿಗೇನು?
ಮರೆಯುವಿರ ನಾ ಬೀರಿದೊಲುಮೆಯಾ ಮಾತ?
ಮರೆಯುವಿರ ನಾನಿತ್ತ ಭರವಸೆಗಳಿಂಪ?
ಮರೆಯುವಿರ ಪಲ್ಲಕ್ಕಿಯನು ಹೊತ್ತ ಪರಿಯು,
ಎನಗಾಗಿ ಕೂಗಿದಾ ಜಯಘೋಷ ಸಿರಿಯು?

ಸಿರಿಬಣ್ಣ ಕಾರೆನ್ನ ನೆನಪ ತರಬಹುದು,
ಕುರಿಮಂದೆ ಕುರುಬನೂ ನೆನಪತರಬಹುದು!
ಹೊಸವದನ ನೋಡೆನ್ನ ಮರೆಯುವಿರ ನೀವು?
ಜಿಂದಬಾದ್ ಕೂಗೆನಗೆ ಇಲ್ಲವೆ, ಇನ್ನೂ?
ಮರೆಯದಿರಿ, ಮರೆಯದಿರಿ, ಮರೆಯದಿರಿ ಎನ್ನ
ನಾ ಮರೆಯೆ! ನಾ ಮರೆಯೆ! ನಾ ನಿಮ್ಮ ಮರೆಯೆ!

—ಪದ್ಮಿನಿ.

ಹಬ್ಬ

ನಾಳೆ ಬೆಳಗಾಗ ನಮಗೆ ಹಬ್ಬ ಬಂತಲ್ಲಾ,
ದೊಡ್ಡ ಹಬ್ಬ ಬಂತಲ್ಲಾ!
ಗೋಧಿ ಬೆಲ್ಲವೆ ಇಲ್ಲ, ಕಾಯಿ ಮೊದಲೆ ಇಲ್ಲ,
ಬೂದಿ ಕುಂಬಳ ಕಾಯಿ ಹೂವು ಬಾಳೆಯಹಣ್ಣು
ಒಂದೂ ತರೋ ಹಂಗಿಲ್ಲ, ಕೈಲಿ ಕಾಸೇ ಇಲ್ಲವಲ್ಲ!
ಬಾರೋ, ತಮ್ಮ, ನಿನಗೊಂದು ಮಾತು ಹೇಳುತ್ತೇನೆ,
ಹಬ್ಬ ಎಂಬೋದದ್ನ ನೀನು ಮಾಡೋ ರೀತೀನ
ಗೋಧಿ ಬೆಲ್ಲವು ಬೇಡ, ಕಾಯಿ ಒಡೀಲೇ ಬೇಡ
ಬೂದಿ ಕುಂಬಳ ಬೇಡ, ಹೂವು ಬಾಳೆಗಳೇಕೆ
ಒಂದು ತರಬೇಡ ನೀನು, ಹಬ್ಬ ಮಾಡೋಕೆ!
ಹಬ್ಬ ಮಾಡೋಕೆ ನಮಗೆ ಒಬ್ಬಟ್ಟೇ ಬೇಡ!
ಹಬ್ಬ ಮಾಡೋಕೆ ನಮಗೆ ಒಗ್ಗಟ್ಟೇ ಸಾಕು!
ಹಬ್ಬ ಮಾಡೋಕೆ ಒಳ್ಳೆ ಹಣ್ಣು ಕಾಯ್ಗಳೆ ಏಕೆ?
ಹಬ್ಬ ಮಾಡೋಕೆ ಒಳ್ಳೆ ಕಣ್ಣು ಕೈ ಕಾಲೇ ಸಾಕು!
ಶಾಲು ಹೊದ್ದು ಕೂತು ಹಬ್ಬ ಮಾಡಲೇಬೇಕು?
ಸಾಲವಿಲ್ಲದ ಹಬ್ಬ, ಅದೇ ಉತ್ತಮ ಹಬ್ಬ!
ಶೀಲವಂತನೆಂಬೊ ನಾಮಗಳಿಸೋದು ಹಬ್ಬ!
ಇಂಗು ಒಗ್ಗರಣೆ ಹಾಕಿ ಸಾರು ಮಾಡೋದಕ್ಕಿಂತ
ಹಂಗ, ಇಲ್ಲದ ಬಾಳು ಅಂಥ ಹಬ್ಬವು ಉಂಟೆ?
ಮಾವ ಕೊಟ್ಟರೋ ಮಗಳ ಪ್ರೇಮದಿಂದಲಿ ಸಾಕು!
ಜೀವ ಕಾಡಿಸೋ ವ್ಯಾಧಿ ಇಲ್ಲದಿರೋದೆ ಹಬ್ಬ!
ಅಣ್ಣ, ತಮ್ಮ ಎಂದು, ಬಂಧು ಬಳಗಾನೆಲ್ಲ
ಬಾರೆ ಕೂರೊ ಎಂದು ಮಾತನಾಡಿಸೋದು ಹಬ್ಬ!
ನಾಳೆ ಬೆಳಗಾನ ಇಂಥ ಹಬ್ಬ ಬಂತಲ್ಲಾ!
ದೊಡ್ಡ ಹಬ್ಬ ಬಂತಲ್ಲಾ!
ನಾಳೆ ನಾಳದ್ದು ಇನ್ನು ಬಾಳಿ ಬದುಕೋ ತನಕ
ಮಾಡೋ ರೀತಿಯು ತಿಳಿದು
ನಡೆಯೋ ನರಮನುಷ್ಯಗೆ
ಹಬ್ಬ! ದಿನವೂ ಹಬ್ಬ!

—ಸೋಮಣ್ಣ.

ವಿಹಂಗಮ ರಾಜ್ಯದಲ್ಲಿ

೧. ಅಧಿಕೃತ ಭಾಷೆ

ಸಿಂಗಳೀಕ ಪ್ರಭುತ್ವ ಕೊನೆಗೊಂಡು ಪಕ್ಷಿ ರಾಜ್ಯಾಂಗ ರಚನೆಯ ನಂತರವೂ ಪಕ್ಷಿರಾಜ್ಯದಲ್ಲಿ ಸಿಂಗಳೀಕ ಭಾಷೆಯೇ ಅಧಿಕೃತ ಭಾಷೆಯಾಗಿ ಉಳಿದಿತ್ತು. ರಾಜ್ಯಾಂಗದಲ್ಲಿ, ಗಿಡಗ ಭಾಷೆಯೇ ರಾಷ್ಟ್ರಭಾಷೆ; ಅದರೊಡನೆ ಗಿಳಿ, ಬುಲ್‌ಬುಲ್, ಕೋಗಿಲೆ, ಗೊರವಂಕ, ಕಾಗೆ, ಟಿಂಹಕ್ಕಿ ಮೊದಲಾದ ಉಳಿದ ಒಂಭತ್ತು ಭಾಷೆಗಳೂ ರಾಷ್ಟ್ರಭಾಷೆಗಳು; ಬಹು ಸಂಖ್ಯಾತ ಪಕ್ಷಿಗಳಿಗೆ ಗಿಡಗ ಭಾಷೆ ವೇದ್ಯವಾಗುವುದರಿಂದ, **ಕೆಲಕಾಲ** ಕಳೆದ ನಂತರ ಗಿಡಗಭಾಷೆ ಅಧಿಕೃತ ಭಾಷೆಯಾಗಬೇಕು; ಎಂದು ಮುಂತಾಗಿ ಉಲ್ಲೇಖಿಸಲ್ಪಟ್ಟಿತ್ತು.

ಗಿಡಗಗಳು, ರಾಜ್ಯಾಂಗದಲ್ಲಿನ **ಕೆಲಕಾಲ** ಎಂಬುದಕ್ಕೆ, ತಕ್ಷಣ ಎಂದು ಅರ್ಥ ಮಾಡಿದುವು; ಅಲ್ಲದೆ ಗಿಡಗ ಭಾಷೆಯನ್ನು ಈಕ್ಷಣ ಒಪ್ಪಿಕೊಳ್ಳಿ ಎಂದು ಉಳಿದ ಪಕ್ಷಿಗಳನ್ನು ಬಲಾತ್ಕರಿಸಿದವು ಹಾಗೆ ಒಪ್ಪಿಕೊಳ್ಳದ ಪಕ್ಷಿಗಳ ಕೊಕ್ಕನ್ನು ಮುರಿಯುವುದಾಗಿ ಜೇಲಿಸಾಲಿನಲ್ಲಿ ಘೋಷಿಸಿದವು.

ಮುಖ್ಯಮಂತ್ರಿ ಗರುಡ ಈ ಬಲಾತ್ಕಾರ, ಈ ಅವಸರ ಬೇಡ ಎಂದಿತ್ತು ಆದರೆ ಗಿಡಗಳು ಒಳಗೊಳಗೇ ನಕ್ಕು, ಬೇಲಿಸಾಲಿನ ಹೆದರಿಕೆಯನ್ನು ಹೆಚ್ಚಿಸಿದವು

ಗಿಡಗಗಳ ಈ ದಬ್ಬಾಳಿಕೆಯನ್ನು ಬಿಳಿ ಕಾಗೆಯೊಂದು ಪ್ರತಿಭಟಿಸಿತು. ಉತ್ತರದಲ್ಲ ಗಿಳಿ, ದಕ್ಷಿಣದ ಕೋಗಿಲೆಗಳು ಬಿಳಿ ಕಾಗೆಗೆ ಬೆಂಬಲ ಕೊಟ್ಟವು.

ಪಕ್ಷಿಪುರದ ಉದ್ಯಾನವನದಲ್ಲಿ ಪಕ್ಷಿಗಳೆಲ್ಲಾ ಸಭೆ ಸೇರಿದವು. ಗಿಡಗಗಳು, ಈಕ್ಷಣ ಗಿಡಗ ಭಾಷೆಯೇ ಅಧಿಕೃತ ಭಾಷೆಯಾಗಲಿ ಎಂದು ಹುಯ್ಲಿಟ್ಟವು.

ಹದ್ದುಗಳು ರೆಕ್ಕೆ ಬಡಿದವು.

ಕಾಗೆಗಳು ಕಾಕಾ ಎಂದವು.

ಗಿಳಿಗಳು ತಾಪ ತಾಳಲಾರದೆ 'ರಾಮರಾಮ' ಎಂದವು.

ಕೋಗಿಲೆಗಳು 'ಕುಹೂ ಕುಹೂ' ಎಂದವು.

ಬುಲ್‌ಬುಲ್‌ಗಳು 'ಬುಲ್‌ಬುಲ್'' ಎಂದವು.

ಗೂಗೆಗಳು 'ರಾವಣ ರಾವಣ' ಎಂದವು.

ಗೀಜಗ 'ಗೀರ್ ಗೀರ್' ಎಂದಿತು.

ಕೊಕ್ಕರೆಗಳು 'ಕ್ವ್ಯಾ ಕ್ವ್ಯಾ' ಎಂದವು. ನೀಲಕಂಠ ಷಡ್ಜಕ್ಕೇರಿತು.

ಸಭೆಯಲ್ಲಿ ಕೋಲಾಹಲವೆದ್ದಾಗ, ಗರುಡ 'ಸೈಲೆನ್ಸ್' ಎಂದ. ಅದೇ ಸಮಯದಲ್ಲಿ ಉದ್ಯಾನವನ ವಿಹಾರಕ್ಕೆಂದು ಬಂದ, ರೊಮ್ಯಾಂಟಿಕ್ ಕವಿಯೊಬ್ಬನು ಈ ಕೂಗುಗಳನ್ನು ಕೇಳಿ,

'ಏನಿದು ಕಲಕಲರವ ?
ಅಹ ! ಆನಂದಾನುಭವ !'

ಎಂದು ಪದ್ಯಕಟ್ಟಿ ಭಾವಸಮಾಧಿ ಬಂದು ಮೂರ್ಛಿತನಾದನು. ಅಲ್ಲಿಯೇ ಇದ್ದ ನವ್ಯ ಕವಿ, ಮೂಗುಮುರಿದು,

'ಏನಿದು ನರಕ,
ಕಿವಿ ಕೊರೆಕ ?'

ಎಂದು ಕೇಳುತ್ತಾ ಉದ್ಯಾನವನವನ್ನು ಬಿಟ್ಟು ಕನ್ಸರ್ವೆನ್ಸಿ ಲೇನಿನ ಕಡೆಗೆ ತೀವ್ರ ಗತಿಯಿಂದ ನಡೆದು ಹೋದನು.

ನೀತಿ :—ರೊಮ್ಯಾಂಟಿಕ್ ಕವಿಗಳಿಗೆ ಬುದ್ಧಿ ಇಲ್ಲ.

೨. ಘೂಕ ಸಂಘ

ಎಲೆಕ್ಟ್ರೀಕರಣ, ಹಾಗೂ ಅಣುಯುದ್ಧಗಳ ದೆಸೆಯಿಂದ ಮರಗಿಡಗಳೇ ನಾಶವಾಗಿ ಹಕ್ಕಿಗಳಿಗೆ ನೆಲೆಯಿಲ್ಲದೆ ಹೋದೀತೆಂಬ ಭಯ ಪಕ್ಷಿರಾಜ್ಯಕ್ಕಿತ್ತು. ಮುಖ್ಯಮಂತ್ರಿ ಅಂತರ್ವಿಶ್ವಸಮಸ್ಯಾಮಗ್ನನಾಗಿದ್ದ.

ಇತ್ತ ಕಾಕ ಪ್ರಾಂತ್ಯದಲ್ಲಿ ರಾಜಕೀಯ ಹದಗೆಟ್ಟಿತ್ತು. ಪ್ರಥಮ ಮುಖ್ಯಮಂತ್ರಿ ಬಿಳಿ ಕಾಗೆಯನ್ನು ಬಹು ಸಂಖ್ಯಾತ ಕರಿಕಾಗೆಗಳು ಮೂಲೆಗಟ್ಟಿದವು. ಕರಿಕಾಕರಾಜನೇ ಚುನಾವಣೆಗೆ ನಿಂತ

ಕಾಕ ಪ್ರಾಂತ್ಯದಲ್ಲಿ ಗೂಗೆಗಳ ಸಂಖ್ಯೆ ಬಹಳಷ್ಟಿತ್ತು. ನಿಶಾಚರರಾದ ಗೂಗೆಗಳಿಗೆ ಪಕ್ಷಿರಾಜ್ಯದಲ್ಲಿ, ರಾಜ್ಯಾಂಗಕ್ಕೊಳಗಾಗಿ ಇರುವ ಇಚ್ಛೆ ಇರಲಿಲ್ಲ. ಕರಿಕಾಕರಾಜ ಗೂಗೆಗಳೊಡನೆ ರಹಸ್ಯ ಒಪ್ಪಂದ ಮಾಡಿಕೊಂಡ. ಇದು ಗರುಡಪಕ್ಷೀಯ ಕಾಗೆಗಳಿಗೆ ಒಪ್ಪಿಗೆ ಬರಲಿಲ್ಲ ಅವು ಕಾಕರಾಜನ ವಿರುದ್ಧ ಗರುಡನೆದುರು ದೂರಿಟ್ಟವು. ಆದರೆ ಗರುಡನಿಗೆ ಗೃಹಸಮಸ್ಯೆಗಳ ಪರಿಚಯ ಚೆನ್ನಾಗಿರಲಿಲ್ಲ ಕಾಕರಾಜನು ಗರುಡನಿಗೆ ಏನೋ ಸಬೂಬು ಹೇಳಿ ಅವನ ಬೆಂಬಲವನ್ನೂ ಪಡೆದ. ಹೇಗೋ

ಚುನಾಯಿತನಾದ. ಕಾಕಪ್ರಾಂತ್ಯದ ಮುಖ್ಯ ಮಂತ್ರಿಯಾದ. ಗೂಗೆಗಳಿಗೆ ಬಲ ಬಂದಿತು. ಕಾಕರಾಜ ಹೇಗಿದ್ದರೂ ತಮ್ಮ ಹಸ್ತಕ ಎಂದುಕೊಂಡು ಘೂಕಸಂಘ ಪುಕ್ಕ ಬಿಚ್ಚಿತು.

"ಬಿಳಿ ಕಾಗೆಗಳನ್ನು ಸುಡಿರಿ"

"ಗರುಡ, ಹದ್ದುಗಳ ಪುಕ್ಕ ಕಿತ್ತಿರಿ"

"ಶ್ರೀಮನ್ನಾರಾಯಣನ ಅಧ್ಯಕ್ಷಗಿರಿ ಬೇಡ"

"Owls of the world, hoot!"

"ಪಕ್ಷಿ ರಾಜ್ಯಾಂಗ ದಹಿಸುವಾ!"

"ಘೂಕ ಸ್ಥಾನ ಬೇಕು!"

ಎಂಬಿವೇತ್ಯಾದಿ ಚಳುವಳಿಗಳನ್ನು ಘೂಕಸಂಘ ನಡೆಸಿತು. ಕಾಕರಾಜ ತೆಪ್ಪನಿದ್ದ

ಪಕ್ಷಿ ಸಂಕುಲ ಕಳವಳಗೊಂಡಿತು. ಪಕ್ಷಿಪ್ರಧಾನಿ ಗರುಡನಲ್ಲಿ ಮೊರೆಯಿಟ್ಟಿತು. ಗರುಡ ಕಾಕಪುರಕ್ಕೆ ಹೋದ. ಗೂಗೆಗಳು ರಾತ್ರಿಯ ಹೊತ್ತು ಕಪ್ಪು ಬಾವುಟ ಹಿಡಿದುಕೊಂಡು, ಘೋಷಣೆಗಳನ್ನು ಕೂಗುತ್ತಾ ಕಾಗೆಗಳ ಕೆಲವು ಗೂಡುಗಳಿಗೆ ಬೆಂಕಿ ಇಟ್ಟವು ಪರಿಸ್ಥಿತಿ ಪ್ರಕ್ಷುಬ್ಧವಾಯ್ತು.

ಗರುಡ ಪರಿಸ್ಥಿತಿಯನ್ನು ಹತೋಟಿಗೆ ತಂದ. "ವಿನಾಶಕಾರೀ ಘೂಕಗಳಿಗೆ ಪಕ್ಷಿರಾಜ್ಯದಲ್ಲಿ ಸ್ಥಾನವಿಲ್ಲ. ಹೊರಟುಹೋಗಲಿ ಗೂಗೆಗಳು" ಎಂದು ಘೋಷಿಸಿದ. ನಂತರ ಪಕ್ಷಿಪುರಕ್ಕೆ ಹೋದ.

"ನಮಗೆ ಪಕ್ಷಿರಾಜ್ಯ ಬೇಡವೇ ಬೇಡ. ಘೂಕಸ್ಥಾನ ಸ್ವತಂತ್ರವಾಗಲಿ" ಎಂದು ಗೂಗೆಗಳು ಘೂಕ್ಕರಿಸಿದವು.

ಇದೀಗ ಕಾಕರಾಜನ ಕತ್ತಿಗೆ ಕಣ್ಣು ಬಂದಿತು. ಪಕ್ಷಿಗಳೆಲ್ಲಾ ಅವನನ್ನು ಉಗಿದವು. ಗೂಗೆಗಳು ಅವನನ್ನು ಕಂಡು ಹೆದರಲೇ ಇಲ್ಲ. ಅಯ್ಯೋ ಪಕ್ಷಿ ಪ್ರಜಾಪ್ರಭುತ್ವವೇ ಎಂದು ತಿಳಿದ ವಿಹಂಗಮಗಳು ಕಣ್ಣೀರಿಟ್ಟವು. ಕೆಲದಿನದಲ್ಲೇ ಕಾಕರಾಜನ ಕೊಕ್ಕು ಮುರಿಯಿತು. ಆಗ ಯಾರೂ ಕನಿಕರಿಸಲಿಲ್ಲ ಹೀಗೆ ಕಾಕರಾಜನ ಅಂತ್ಯವಾಯ್ತು.

ನೀತಿ: ಮಾಡಿದ್ದು ಉಣ್ಣುತಾಳೆ, ಮಣೆಯಂಥ ಕಡುಬು. ಇದು ಏನು ಸುಳ್ಳಲ್ಲ.

—ಅ. ರಾ. ಸೇ.

ಹುಚ್ಚು ಹಿಡಿಯಿತು ಎಮಗೆ

ಹುಚ್ಚು ಹಿಡಿಯಿತು ಎಮಗೆ ಹುಚ್ಚು ಹಿಡಿಯಿತು
ಮುಖ್ಯ ಭಾಷೆಯಾವುದೆಂಬ ಶುಷ್ಕ ತರ್ಕ ತಲೆಗೆ ಏರಿ

ಹಿಂದಿಯೊಂದೆ ರಾಷ್ಟ್ರ ಭಾಷೆ ಎಂದು ಹಲವರು ನುಡಿವರು
ಇಂಗ್ಲಿಷನ್ನು ಕಿತ್ತು ಬಿಸುಡಿ ಎಂದವರು ಊಳಿಡುವರು
ಮಾತೃಭಾಷೆಯೆ ಸಾಕದೆಂದು ಮತ್ತೆ ಕೆಲವರು ಮೊರೆವರು
ಕೊನೆಗೆ ಮೂರು ಬೇಕೆ ಬೇಕು ಎಂದು ಬೊಬ್ಬಿರಿದೊರೆವರು
ಹಲವರಾಡುವ ನುಡಿಯದೊಂದೆ ನ್ಯಾಯ ನಾಡಿಗೆ ಎಂಬರು
ಸಂಸ್ಕೃತವ ಬಿಡಲಾಗದೆಂದು ಕೆಲರು ಗೋಳನು ಹುಯ್ವರು
ಔತ್ತರೇಯರು ತಮಿಳು ಕಲಿಯಲಿ ಎಂಬ ವಾದವ ಮೆರೆವರು
ಭಾಷೆ ಹತ್ತನು ಕಲಿತರೇನೇ ಮುಕ್ತಿ ಎಂಬರು ಹಿರಿಯರು
ರಾಷ್ಟ್ರಭಾಷೆ ರಾಜ್ಯಭಾಷೆ ನಮ್ಮ ಭಾಷೆ ನಿಮ್ಮ ಭಾಷೆ
ಎಂಬ ಗೊಂದಲದಲ್ಲಿ ಬೆಳೆದಿದೆ ಲಿಪಿಯಿಂದ ಇನ್ನೊಂದು ಭಾಷೆ
ಎಲ್ಲ ಭಾಷೆಗಳನ್ನು ಮೆಟ್ಟಿ ಮೆರೆಯುವಂಥ ದ್ವೇಷಭಾಷೆ
ಭಾಷೆಯರಿಯದರನ್ನು ಕೆರಳಿಸಿ ನಿಲಿಸುವಂಥ ರೋಷಭಾಷೆ
ಹುಚ್ಚು ಹಿಡಿಯಿತು ಎಮಗೆ ಹುಚ್ಚು ಹಿಡಿಯಿತು.

—ರಾಮಿ.

ಸದವಕಾಶಗಳಿಗೆ ಬರಗಾಲವಿಲ್ಲ !

ಬೆಳೆಯೇನೋ ಬೇಕಾದಹಾಗಿದೆ. ಆದರೆ ಕುಯ್ಯುವವರು ಮಾತ್ರವಿಲ್ಲ— ಎಂದಹಾಗೆ ಸದವಕಾಶಗಳು ನಮ್ಮ ಪ್ರಜಾರಾಜ್ಯದಲ್ಲಿ ಬೇಕಾದಹಾಗಿವೆ; ಆದರೆ ಅವುಗಳನ್ನು ಉಪಯೋಗಿಸಿಕೊಳ್ಳುವವರು ಎಷ್ಟು ಮಂದಿ? ಕೆಲವರಾದರೂ ಅಂಥ ಅವಕಾಶಗಳಿಗಾಗಿ ಹೊಂಚುಹಾಕಿ ಕುಳಿತು ಅವುಗಳು ಕಂಡು ಬಂದಾಗ ಅವನ್ನು ಗಬಕ್ಕನೆ ಹಿಡಿದು ತಂತಮ್ಮ ಅಭಿವೃದ್ಧಿಯನ್ನು ಸಾಧಿಸಿಕೊಂಡಿದ್ದಾರೆ. ನಮ್ಮ ತಮ್ಮಯ್ಯ ಇತ್ತೀಚೆಗೆ ಅಂಥವರ ಸಾಲಿಗೆ ಸೇರಿದ. ದೇಶ ಸ್ವತಂತ್ರವಾದಂದಿನಿಂದ ಒಂದೇ ಸಮನೆ ಗೊಣಗುತ್ತಿದ್ದ ತಮ್ಮಯ್ಯ "ಎಂಥ ಪ್ರಜಾರಾಜ್ಯವಯ್ಯ; ಏಳಿಗೆ ಹೊಂದಲು ಒಂದೇ ಒಂದು ಅವಕಾಶ ಸರಿಯಾಗಿ ಸಿಗುವುದಿಲ್ಲ. ಕೆಲವರೇನೋ ಕಾಣಕಾಣುತ್ತ ಮೇಲೆ ಬಂದರು. ನನ್ನಂಥ ಬಹು ಮಂದಿಯ ಅವಸ್ಥೆ ಏನೇನೂ ಸುಧಾರಿಸಿಲ್ಲ" ಎಂದು ಮುಂತಾಗಿ ಅವನ ಗೋಳು ಇದ್ದೇ ಇತ್ತು. ಆದರೆ ಇತ್ತೀಚೆಗೆ ಅವನ ಗೊಣಗಾಟವೆಲ್ಲ ನಿಂತುಹೋಯಿತು. ಕಂಡಲ್ಲಿ ಕಣ್ಣಿಗೆ ಬೀಳುತ್ತಿದ್ದ ಆತ ಈಗ ಕಾಣ ಸಿಗುವುದು ಅಪರೂಪವಾಗಿದೆ. ಇದೇನು ಪರಿವರ್ತನೆ? ತಮ್ಮಣ್ಣ ಗಿಟ್ಟಿಸಿಕೊಂಡ ಅವಕಾಶ ಯಾವುದು ?

ಕಾಲೇಜು ಮೆಟ್ಟಲನ್ನು ಆತ ಒಂದು ವರ್ಷಕ್ಕಿಂತ ಹೆಚ್ಚು ಸವೆಸಲಿಲ್ಲ. ಅಪ್ಪ ತೀರಿಕೊಂಡಿದ್ದರಿಂದ ಅವರ ಅಂಗಡಿ ನಡೆಸಬೇಕಾಯಿತು. ಆದರೆ ಈತ ಅಂಗಡಿ ಸಾಮಾನುಗಳನ್ನು ಮಾರುವ ಬದಲಿಗೆ ಅಂಗಡಿಯನ್ನೇ ಮಾರಿದ. ಒಂದು ಗುಂಡುಸೂಜಿ ತಯಾರಿಸುವ ಕಾರ್ಖಾನೆ ಸ್ಥಾಪಿಸಿದ. ಅವನ ಗುಂಡುಸೂಜಿಗಳನ್ನು ಯಾರೂ ಕೊಂಡುಕೊಳ್ಳದೆ ಅವಕ್ಕೆ ತುಕ್ಕುಹಿಡಿದು ಅವು ತಯಾರಿಸಿದವನ ಕೈಯನ್ನೇ ಪ್ರಿಕ್ಕಿದವು. ಬಂಡವಾಳ ಕರಗಿತು. ತಮ್ಮಯ್ಯ ಜಲಂಧರ ಕಂಪೆನಿಯ ಟೋಪಿ ಏಜನ್ಸಿ ತೆಗೆದುಕೊಂಡ. ಆದರಿಂದ ದೊರೆತಿದ್ದು ಟೋಪಿಯೇ. ಜೀವ ವಿಮೆಯೇ ಜೀವನಾಧಾರವೆಂದು ಅದರ ಏಜಂಟಾದ. ನಾಲ್ಕೆಂಟು ಪುಸ್ತಕ ಬರೆದು ಆರುಕಾಸು ಬೆಲೆಯಿಟ್ಟು ಮಾರಿದ. ಇಲೆಕ್ಷನ್ ಬಂತು. ಅವರಿವರ ಬೆನ್ನು ಹಿಡಿದು ಓಡಾಡಿ ಭಾಷಣ ಘೋಷಣ ಬಿಗಿದ. ಆದರೆ ಎಲ್ಲದರಲ್ಲಿಯೂ ಅವನಿಗೆ ಸೋಲೇ. ಯಾವ ಎತ್ತಿನ ಬಾಲ ಹಿಡಿದರೂ ಅವನಿಗೆ ದಕ್ಕಿದ್ದು ಒದೆಯೇ. ಹೀಗಿರುವಾಗ ಆತ ಗೊಣಗುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ. ಯಾವುದರಿಂದಲೂ ಅವನ ಸಣಕಲು ದೇಹ ತುಂಬಿಕೊಳ್ಳಲಿಲ್ಲ. ಬಾಡಿದ ಮೂತಿ ಅರಳಲಿಲ್ಲ. ಖಾನ್‌ಪುರ, ಕಾಕಿನಾಡ, ಕಲ್ಲಿಕೋಟೆ ಅಂತ ಅಲೆದಿದ್ದೊಂದು ಬಂತು.

ಆದರೆ ಇತ್ತೀಚೆಗೆ ತಮ್ಮಯ್ಯನ ಓಡಾಟವೆಲ್ಲ ದಕ್ಷಿಣದಲ್ಲಿ. ತಿರುಚಿ, ರಾಮನಾಡು, ಮಧುರೆ ಮದ್ರಾಸಿನ ಕಡೆ. ಆವನ ಮುಖದಲ್ಲಿ ಒಂದು ಹೊಸಕಳೆ ಮೂಡಿದೆ. ಚುಂಗೆದ್ದುಕೊಂಡಿದ್ದ ಪ್ಯಾಂಟು ಬುಷ್‌ಕೋಟುಗಳನ್ನೆಲ್ಲ ಎಸೆದು, ಆತ ಲಕ್ಷಣವಾಗಿ ಧೋತ್ರವುಟ್ಟು, ಜುಬ್ಬಾ ಧರಿಸಿ, ಟೋಪಿ ಏರಿಸತೊಡಗಿದ್ದಾನೆ. ತಮ್ಮಯ್ಯನಿಗೆ ಶುಕ್ರದೆಶೆ ಒದಗಿರೋಹಾಗಿದೆ ಎಂದು ಜನ ಆಡತೊಡಗಿದ್ದಾರೆ.

ಏನದು ನೋಡಿಬಿಡೋಣ ಅಂತ ಮೊನ್ನೆ ತಮ್ಮಯ್ಯನ ಭೇಟಿ ತೆಗೆದುಕೊಳ್ಳುವುದಕ್ಕೆ ಹೋದೆ. ಆತ ತನ್ನ ಏರ್‌ ಕಂಡಿಷಂಡ್‌ ಆಫೀಸು ಕೋಣೆಯಲ್ಲಿ ಕೂಲಾಗಿ ಕೂತಿದ್ದ. ನಮಸ್ತೇ ಎಂದರೆ ಕಿರುನಗೆ ಮಾತ್ರ ಬೀರಿದ. "ಏನಪ್ಪ ಸಮಾಚಾರ, ಜಯಲಕ್ಷ್ಮಿ ಯಾವ ರೂಪದಲ್ಲಿ ಬಂದು ಕೈ ಹಿಡಿದಳು ?" ಎಂದು ಕೇಳಿದೆ.

ತಮ್ಮಯ್ಯ ಗುಂಭವಾಗಿ "ಕಳಗಂ ಕೃಪೆ" ಎಂದ ನಸುನಕ್ಕು.

"ಅದೇನದು, ನೀನು ಹೊಸತಾಗಿ ಕಟ್ಟಿಸುತ್ತಿದೀಯಲ್ಲ, ಆ ಮನೆಯ ನಾಮಧೇಯವೆ ?" ಎಂದು ಕೇಳಿದೆ.

"ಅದೂ ಒಂದು ಐಡಿಯಾ" ಎಂದ ತಮ್ಮಯ್ಯ. ನನಗೆ ರೇಗಿತು. "ದೊಡ್ಡ ಮನುಷ್ಯನಾಗಿದೀಯ. ದೊಡ್ಡ ಮನುಷ್ಯರ ಹಾಗೆ ಆಡೋದಕ್ಕೆ ಕಲಿತುಬಿಟ್ಟೆ, ಅಲ್ವೆ ?" ಎಂದು ಹೊರಟು ನಿಂತೆ. ಆಗ ತಮ್ಮಯ್ಯ ನನ್ನನ್ನೆಳೆದು ಕೂರಿಸಿಕೊಂಡು ಗಂಟಲಿಗೆ ಬಾದಾಮಿ ಹಾಲು ಸುರುವಿ ತನ್ನ ಕಂತೆಯನ್ನು ಬಿಚ್ಚಿದ.

ಹೌದು. ಆತ ಹೇಳಿದ ಹಾಗೆ ಕಳಗಂನವರ ಚಟುವಟಿಕೆಗಳೇ ಪ್ರಜಾರಾಜ್ಯದಲ್ಲಿ ಆತ ಚಾತಕಪಕ್ಷಿಯಂತೆ ನಿರೀಕ್ಷಿಸುತ್ತಿದ್ದ ಅವಕಾಶವನ್ನು ಅವನಿಗೆ ಒದಗಿಸಿ ಕೊಟ್ಟಿದ್ದು. ರಾಮಸ್ವಾಮಿ ನಾಯ್ಕರರ ದೊಡ್ಡ ಪಟವನ್ನು ತಮ್ಮಯ್ಯ ತನ್ನ ತಲೆಯ ಮೇಲೆ (ಗೋಡೆಗೆ) ನೇತುಹಾಕಿದ್ದು ಅರ್ಥವಾಯಿತು.

ತಮ್ಮಯ್ಯನ ಅದೃಷ್ಟ ಖುಲಾಯಿಸಿದ್ದು ಮೊನ್ನೆ ಕಳಗಂನವರು ನಮ್ಮ ಘಟನೆಯನ್ನೂ ಭೂಪಟವನ್ನೂ ಸುಡುವ ಕಾರ್ಯಾಚರಣೆ ಕೈಗೊಂಡರಲ್ಲ, ಆಗ. ಕಪ್ಪಂಗಿಯವರಿಗೆಲ್ಲ ಬೇಕೆನ್ನುವಷ್ಟು ಘಟನೆಯ ಪ್ರತಿಗಳನ್ನೂ ಇಂಡಿಯಾ ಮ್ಯಾಪುಗಳನ್ನೂ ಒದಗಿಸಿದವನು ನಮ್ಮ ತಮ್ಮಯ್ಯ ಎಂಬುದು ನಿಮಗೆ ತಿಳಿದಿರಲಿಕ್ಕಿಲ್ಲ ಅವುಗಳನ್ನೆಲ್ಲ ಅಗ್ಗವಾಗಿ ಅಚ್ಚುಹಾಕಿಸಿ ಒಂದಕ್ಕೆರಡು ಬೆಲೆಗೆ ಮಾರಿದ್ದರಿಂದ ಆತನಿಗೆ ಸಾಕಷ್ಟು ಲಾಭ ದೊರೆಯಿತು. ಆದರೆ ಅದು ಮುಖ್ಯವಲ್ಲ. ಇನ್ನೂ ಮುಂದಿದೆ ಹೋಳಿಹಬ್ಬ. ನಾಯ್ಕರರು ಇನ್ನೂ ಹಲವಾರು ಕಾರ್ಯಕ್ರಮುಗಳನ್ನಿಟ್ಟುಕೊಂಡಿದಾರಂತೆ. ಹಿಂದೆ ವಿನಾಯಕ ವಿಗ್ರಹ ಭಂಜನ ಕಾರ್ಯಕ್ರಮುವನ್ನು ಅವರು ಕೈಗೊಂಡಿದ್ದರಲ್ಲವೆ? ಹಾಗೆಯೇ ಬೇರೆ ಬೇರೆ ಹಬ್ಬಗಳು ಬಂದ ಕೂಡಲೆ ಸಂಬಂಧಪಟ್ಟ ಆರಾಧ್ಯ ದೇವತೆಯ ಚಿತ್ರಗಳನ್ನೂ ವಿಗ್ರಹಗಳನ್ನೂ ಕಪ್ಪಂಗಿಯವರು ಮನೆಮನೆಯಲ್ಲಿಯೂ ಬೀದಿಬೀದಿಗಳಲ್ಲಿಯೂ ಸುಟ್ಟೋ, ಸುತ್ತಿಗೆ ಪೂಜೆಮಾಡಿಯೋ ಧ್ವಂಸಗೊಳಿಸುವ

ಯೋಚನೆಯಿದೆಯಂತೆ. ಇನ್ನು ಗಾಂಧಿ, ನೆಹರೂ, ಸಿ ಆರ್. ಅವರ ಚಿತ್ರಗಳು, ಯಜ್ಞೋಪವೀತ, ಪಿಳ್ಳು ಜುಟ್ಟು, ಪಿಂಡ, ಪೂರ್ಣಕುಂಭ, ವಿಭೂತಿ, ನಾಮದ ಉಂಡೆ ಮೊದಲಾದ ಎಷ್ಟೋ ವಸ್ತುಗಳನ್ನು ದ್ರಾವಿಡನಾಡಿನಾದ್ಯಂತ ನಾಶಪಡಿಸುವ ಕಾರ್ಯಕ್ರಮಗಳೂ ಇವೆ. ಅದಕ್ಕೆ ಪೂರ್ವಭಾವಿ ತಯಾರಿ ನಡೆಯುತ್ತಿದೆ. ಆಯಾಯ ಸಾಮಗ್ರಿಗಳನ್ನು wholesale ಒದಗಿಸಿಕೊಡಲು ತಮ್ಮಯ್ಯ ಹೇರಳ ಅಡ್ವಾನ್ಸು ಪಡೆದಿದ್ದಾನೆ. ತನ್ನ ಭಾಗ್ಯ ಬಲಿತ ಬಗೆ ಹೀಗೆ ಎಂದು ವಿವರಿಸಿದ ತಮ್ಮಯ್ಯ.

ವಿದ್ಯಮಾನಗಳನ್ನು ನೋಡುವಾಗ ಯಾಕೋ ಅನುಮಾನವುಂಟಾಯಿತು. ಧ್ವಂಸಮಾಡುವುದಕ್ಕೆ ಕಪ್ಪಂಗಿಯವರಿಗೆ ಹೊಸ ಹೊಸ ಪುಸ್ತುಕಗಳನ್ನು ಈತನೇ ಸೂಚಿಸಿ ತಾನು ಕಾಸುಗಳಿಸುತ್ತಿದ್ದಾನೆಯೋ ಎನ್ನಿಸಿತು. "ಹೀಗೇನೋ ಪಿತೂರಿ?" ಎಂದು ಕೇಳಿಯೇಬಿಟ್ಟೆ.

"ಅಷ್ಟು ಆಳಕ್ಕೆಲ್ಲ ಹೋಗಿ ನನ್ನ ಹೊಟ್ಟೆಗೆ ಕಲ್ಲು ಹಾಕಬೇಡಪ್ಪ"—ಎಂದು ಗೋಗರೆದ ತಮ್ಮಯ್ಯ ಅತ್ತಿತ್ತ ನೋಡಿಕೊಂಡು. ಜನಿವಾರ, ನಾಮದುಂಡೆ ಇತ್ಯಾದಿ ನನ್ನ idea ಗಳೇ. ನಾನೇ ಅವುಗಳನ್ನು ಸೂಚಿಸಿದ್ದು ಸದ್ಯ ಯಾರೊಡನೆಯೂ ಬಾಯಿಬಿಡಬೇಡ. ಎರಡು ಲಕ್ಷ ಜನಿವಾರ ಏಪ್ರಿಲಿನೊಳಗೆ ಒದಗಿಸುವ ಜವಾಬ್ದಾರಿ ಹೊತ್ತಿದ್ದೇನೆ. ನೀನು ಮನಸ್ಸು ಮಾಡೋದಾದರೆ ಮಾಡು. ಶಾಸ್ತ್ರೀಯವಾಗಿ ತಯಾರಿಸಿದ್ದಾಗಬೇಕು. ಅಗ್ರಹಾರದ ಹಾರುವರು ಮನೆಯಲ್ಲಿ ಹತ್ತಿ ಬೆಳೆದು ತಾವೇ ನೂಲು ನೂತು ತಯಾರಿಸಿದರೆ ಮಾತ್ರ ಪವಿತ್ರ. ಅಂಥವುಗಳನ್ನು ಸುಟ್ಟರೆ ಮಾತ್ರ ಉದ್ದೇಶ ಸಾಧನೆಯಾಗುತ್ತದೆ; ಬೆಲೆ ಜೊತೆಗೆ ಎಂಟಾಣೆಯಾದರೂ ಚಿಂತೆಯಿಲ್ಲ ಎಂದು ಕಳಗಂನವರಿಗೆ ಊದಿದ್ದೇನೆ. ಒಪ್ಪಿದ್ದಾರೆ. ಸಂಗ್ರಹಿಸಿ ಕೊಡೋಡಾದರೆ ಕೊಡು ನೀನೂ ಒಂದಷ್ಟು ಘಳಿಸು" ಎನ್ನುತ್ತಾ ಅಡ್ವಾನ್ಸು ಎಂದು ಐನೂರು ಎಣಿಸಿಯೇಬಿಟ್ಟ ತಮ್ಮಯ್ಯ.

"ಕಳಗಂನವರು ಮನಸ್ಸು ಮಾಡೋದಾದರೆ ಸುಡೋದಕ್ಕೆ ಮಡಿಕೋಲು, ಕೃಷ್ಣಾಜಿನದ ಪೆಟ್ಟಿಗೆ, ನಾರುಮಡಿ, ಜಪಸರ ಇತ್ಯಾದಿಗಳನ್ನು ಕೂಡ ಒದಗಿಸಬಲ್ಲೆ" ಎಂದೆ ಉತ್ಸಾಹದಿಂದ.

"ಅವೆಲ್ಲಾ ಮುಂದಕ್ಕೆ ನೋಡೋಣ. ಒಂದೊಂದೇ ನಡೆಯಲಿ" ಎಂದ ತಮ್ಮಯ್ಯ.

ಪ್ರಜಾರಾಜ್ಯದಲ್ಲಿ ಅಭಿವೃದ್ಧಿಗೆ ಅವಕಾಶಗಳು ಹೆಚ್ಚುತ್ತಿವೆ ಎಂಬುದರಲ್ಲಿ ಅನುಮಾನವುಂಟೆ? ನಮಗಂತೂ ಇಲ್ಲ!

—ರಾಮಿ.

ದಾಸಯ್ಯ

ಊರಿಗೆ ಬಂದರೆ, ದಾಸಯ್ಯ । ದೊಡ್ಡ
ಕಾರಲ್ಲಿ ಬಾ ಕಂಡ್ಯ, ದಾಸಯ್ಯ! ॥ ಪ ॥
ಕೇರಿಗೆ ಬಂದರೆ, ದಾಸಯ್ಯ । ಘುತ್
ತೂರಿಯನೂದಿ ಬಾ, ದಾಸಯ್ಯ ॥ ಅ ॥

ಕೊರಳೊಳು ಹೂಮಾಲೆ ಧರಿಸಿದನೆ । ಸಣ್ಣ
ಹೆಗಲಲ್ಲಿ ಸುಖ ದುಃಖ ಹೊತ್ತವನೆ ।
ಇರುಳು ಹಗಲು ನಿನ್ನ ಭಾಷಣ ಬೊಗುಳುತ
ಮರುಳು ಮಾಡುವಂಥ, ದಾಸಯ್ಯ ॥ ೧ ॥

ತುಪ್ಪದನ್ನ ತಿನ್ನ ಬಾರೊ, ದಾಸಯ್ಯ । ನಿನ್ನ
ದರ್ಪಕ್ಕೆ ಮಿತಿ ಇಲ್ಲ, ದಾಸಯ್ಯ ।
ಅಪ್ಪಿ ತಪ್ಪಿ ನಾವು ಪೀಠವ ಕೊಟ್ಟರೆ ।
ಚಿಪ್ಪು ತೋರಿಸಬೇಡ, ದಾಸಯ್ಯ ॥ ೨ ॥

ಹಿಂಗನ್ನು ನುಂಗಿದಾ ಕಪಿಯಂತೆ । ನೀನು
ಟೊಂಗೆ ಹತ್ತ ಬೇಡ, ದಾಸಯ್ಯ ।
ಮುಂದಿನ ದಾರಿಯು, ದಾಸಯ್ಯ । ಕೇಳು
ಮಂದೀನೇ ಕಲಿಸ್ಯಾರು, ದಾಸಯ್ಯ ॥ ೩ ॥

ಸುಣ್ಣವ ಬೆಣ್ಣೆಯು ದಾಸಯ್ಯ । ನೀನು
ಕಣ್ಣಿಗೆ ಹಚ್ಚುವೆ, ದಾಸಯ್ಯ ।
ಸಣ್ಣನಾಮದ ದಾಸಯ್ಯ । ಏಕೆ
ಹೆಣ್ಣು ಮಣ್ಣಿನಾಸೆ, ದಾಸಯ್ಯ ॥ ೪ ॥

ಸಿಟ್ಟು ಮಾಡದಿರು, ದಾಸಯ್ಯ । ಅದು
ಹಿಟ್ಟಿಗೆ ಕಂಟಕ, ದಾಸಯ್ಯ । ನಿನ್ನ
ಗುಟ್ಟು ರಟ್ಟಾದರೆ ದಾಸಯ್ಯ ।
ರಟ್ಟೆ ಹಿಡಿದೆಳೆದಾರು, ದಾಸಯ್ಯ ॥ ೫ ॥

—ಕಾಮತ್.

ಟೀಪಾರ್ಟಿ

ಟೀಪಾರ್ಟಿ, ಗಾರ್ಡನ್ ಪಾರ್ಟಿ, ಭೋಜನಕೂಟ ಇತ್ಯಾದಿಗಳಿಗೆ ಆಹ್ವಾನ ಬಂದರೆ, ಅದಕ್ಕೆ ಒಪ್ಪಿ ಅಲ್ಲಿಗೆ ಹೋಗಲೇಬೇಕು, ಎಂಬ ನಿಯಮವೇನೂ ಇಲ್ಲ. ಆದರೂ, ಒಮ್ಮೊಮ್ಮೆ, ಬುದ್ಧಿಗೆ ಮಂಕು ಕವಿದು, ಎಲ್ಲೋ ಜ್ಞಾನದಲ್ಲಿ, ನಾವು ಆ ಸಮಾರಂಭಗಳು ಎಲ್ಲಿ, ಎಷ್ಟು ಹೊತ್ತಿಗೆ, ಯಾವ ದಿನ ನಡೆಯುತ್ತವೆ, ಎಂಬುದನ್ನೆಲ್ಲ ಸ್ಮರಿಸಿಕೊಂಡು, ಅಲ್ಲಿಗೆ ಪಶುಗಳಂತೆ ನುಗ್ಗೀಬಿಡುತ್ತೇವೆ.

ಪರಸ್ಪರ ಸ್ನೇಹ, ಮಿಲನ, ಮಾತು, ಪರಿಚಯ, ವಿಚಾರವಿನಿಮಯ ಇವುಗಳಿಗೆ ಅನುಕೂಲ, ಎಂದಲ್ಲವೆ ಜನರು, ಈ ಪಾರ್ಟಿಗಳಿಗಾಗಿ ಖರ್ಚಾಗುವ ಹಣ ಕಾಲ ಎರಡನ್ನೂ ನ್ಯಾಯವೆಂದು ವಾದಿಸುವುದು? ನಾನು ಹೇಳುತ್ತೇನೆ, ನನ್ನ ಅನುಭವದಿಂದ ...ಶುದ್ಧ ತಪ್ಪು!

ಈ ಪಾರ್ಟಿಗಳಿಂದ ಮನಸ್ತಾಪವೇ ಹೆಚ್ಚು! ಕರೆಯದೆ ಇದ್ದವರ ಕಣ್ಣು ಕೆಂಪಗೆ! ಕರೆದವರನೇಕರಿಗೆ ಕಾರು ಕಳಿಸಲಿಲ್ಲ, ಎಂಬ ಕೋಪ! ಮುಖ್ಯ ಅತಿಥಿಗಳ ಹತ್ತಿರ ಕೂರಿಸಲಿಲ್ಲ, ಅವರಿಗೆ ತಮ್ಮ ಹೆಸರನ್ನು ಹೇಳಿಕೊಡುವಾಗ ತಪ್ಪಿ ಬೇರೊಂದು ಹೆಸರು ಹೇಳಿಬಿಟ್ಟರು, ತಾವು ಮಂಡಿಸಿದ ಪಂಕ್ತಿಗೆ ಮಂಡಿಗೆ ಬಡಿಸಲೇ ಇಲ್ಲ, ಅಲ್ಲಿಗೆ ಬರುವುದರೊಳಗೆ ಸಾರು ಆರಿಹೋಗಿತ್ತು—ಇತ್ಯಾದಿ ಗುರುಗಳಿಂದಾಗಿ, ಅನ್ನದಾತನಿಗೂ ಅಭ್ಯಾಗತನಿಗೂ ಅಲ್ಲಿಂದಾಚೆಗೆ ಎಣ್ಣೆ ಸೀಗೆ!

ಇನ್ನು ಮಿಲನ?....ಯಾರಿಗೆ ಯಾರು ಮಿಲನ? ನೀವು ಯಾರ ಪಾರ್ಟಿಗೆ ಹೋದರೂ, ಅಲ್ಲಿ ಮುಖ್ಯ ಅತಿಥಿಗಳ ಸುತ್ತ ನಿಂತಿರುವ ಎಂಟು ಹತ್ತು ಮಂದಿಯೇ! ಟೀಪಾರ್ಟಿಯ ಸಂದರ್ಭ ಯಾವುದಾದರೂ ಇರಲಿ, ಅವರೇ ಎಂಟು ಹತ್ತು ಜನ ಆತನ ಸುತ್ತ ಹಲ್ಲುಕಿರಿಯುವುದು. ಅವರಿಗೆ ಆ ಜಾಣತನ ಇದೆ. ಅನ್ನದಾತ ಯಾರೇ ಆಗಲಿ, ಅವರು ನೆಟ್ಟಗೆ ಅವನನ್ನೇ ಬಳಸಿ ಬಾಲವಾಡಿಸುವರು. ಅದ್ದರಿಂದ ನಮ್ಮಂತಹವರಿಗೆ ದೊರಕುವುದು ನಮ್ಮಂಥಹವರ ಮಿಲನವೇ! ನಮಗೆ ಆಗಲೇ ಸುಪರಿಚಿತರಾದ ನಮ್ಮಂತಹವರದೇ!

ಇನ್ನು 'ಮಾತು'? ಟೀಪಾರ್ಟಿಗಳಲ್ಲಿ, ಭೋಜನ ಕೂಟದಲ್ಲಿ, ನೀವು ಆಲಿಸಿದೀರಾ? ಎಂಥ ಮಾತು, ಆಡುತ್ತಾರೆ ಜನ? ಪರಸ್ಪರ ದೂಷಣ, ಚಾಡಿ, ಪಿತೂರಿ, ಜಗಳ, ಅಶ್ಲೀಲ,....ಇವೇ! ಅವನ ಮೇಲೆ ಆವನ ಪಿಸುಪಿಸ, ಅವಳ ವಿಷಯಕ್ಕೆ ಇವಳು ವಿಷ ಹರಡಿ....ಥೂ! ಈ ಪಾರ್ಟಿಗಳು ನಡೆಯದೆ, ಆ ಸಂಜೆ ಅವರೆಲ್ಲರೂ ಅವರವರ ಮನೆಗಳಲ್ಲೇ ಇದ್ದಿದ್ದರೆ, ಎಷ್ಟೋ ಉತ್ತಮವೆನಿಸುವುದು, ಸಮಾಜದ ಕ್ಷೇಮ ಶಾಂತಿಗಳ ದೃಷ್ಟಿಯಿಂದ.

ಆಮೇಲೆ, ಪರಿಚಯ? ಟೀಪಾರ್ಟಿಗಳಲ್ಲಿ ಮುಖ್ಯ ಅತಿಥಿಗಳ ಪರಿಚಯ ಸಂಪಾದಿಸಬಹುದೆಂಬ ನಂಬಿಕೆಯಿಂದ, ಅವುಗಳಿಗೆ ಉಡಿಗೆ ತೊಡಿಗೆ ಸಹಿತ ಪೆಟ್ರೋಲು ಖರ್ಚುಮಾಡಿ, ಹೋಗುವ ವ್ಯಕ್ತಿಗೆ ಸಂಪೂರ್ಣ ನಿರಾಶೆಯಾಗುವುದರಲ್ಲಿ ಸಂದೇಹವೇ ಇಲ್ಲ—ಮುಖ್ಯ ಅತಿಥಿ ಏಕೆ ಉಳಿದ ಅತಿಥಿಗಳ ಪರಿಚಯ ಲಾಭವೂ ಅಷ್ಟೆ ...ಕಾಲಕ್ಕೆ ಸರಿಯಾಗಿ ಬರುವವರಪರೂಪ; ಹೊತ್ತುಮೀರಿ ಬಂದವರಿಗೆಲ್ಲ ಉಪಹಾರ ಸಂಪಾದನೆಯ ಚಿಂತೆ: ಉಪಾಹಾರದ ತಟ್ಟೆ ದೊರೆತರೆ, ವರಿಷ್ಠಪೀಠ ದೊರೆಯಬೇಕಲ್ಲಾ, ಎಂಬ ಚಿಂತೆ. ನಮ್ಮ ಪರಿಚಯ ಲಾಭದ ಚಿಂತೆ, ಯಾರಿಗೂ ಇರುವುದಿಲ್ಲ!

ಕೊನೆಯದಾಗಿ, ವಿಚಾರವಿನಿಮಯ?....ಯಾವ ವಿಚಾರ? ಯಾರೊಂದಿಗೆ ವಿನಿಮಯ?....ಟೀಪಾರ್ಟಿಗಳಲ್ಲಾಗುವ ವಿನಿಮಯ ಎಲ್ಲ ಬಿಡಿಸುವ ಮಾಣಿಗಳೊಂದಿಗೆ! ವಿಚಾರ....ಮತ್ತೊಂದು ಪ್ಲೇಟು ದೊರೆಯಲಾರದೆ, ಎಂಬುದು ಅಷ್ಟೆ!—

—ಎಸ್. ವಿ. ಭಟ್ಟ.

ಬಿಲ್ಲಿ ಡಿಲ್ಲಿಗೋಗಿದ್ದು

(ಶಿಶುಗೀತೆ ಬಲಿತವರಿಗೆ)

ಬಿಲ್ಲಿ ಬಿಲ್ಲಿ ನಮ್' ಬಿಲ್ಲಿ
ಎಲ್ಲಿಗೋಗಿದ್ಯಮ್ಮ?
ಡಿಲ್ಲಿಗೋಗಿದ್ದೆ, ಡಿಲ್ಲಿಗೋಗಿದ್ದೆ
ಡಿಲ್ಲಿಗೋಗಿದ್ದೆ ತಮ್ಮ!

ಬಿಲ್ಲಿ ಬಿಲ್ಲಿ ನಮ್' ಬಿಲ್ಲಿ
ಡಿಲ್ಲೀಲಿ ಏನೇನ್' ಕಂಡೆ?
ಲೋಕ ಸಭೆ ಸೀಟಿನ ಮೇಲೆ
ಪುಟ್ಟದೊಂದ್' ಇಲಿ ಕಂಡೆ!

ಬಿಲ್ಲಿ ಬಿಲ್ಲಿ ನಮ್' ಬಿಲ್ಲಿ
ಇಲಿ ಹಿಡಿದೆಯೇನಮ್ಮ?
Quorum ಗಾಗಿ ಕುಂತ್ಕೊಂಡಿತ್ತು
ಬಿಟ್ಬಿಟ್'ಬಂದೆ ತಮ್ಮ!

—ರಾಮಿ.

—⊰ ಕ್ರಿ. ಕಾಮೆಂಟರಿ ⊱—

ಸಂಪಾದಕ ಮಹಾಶಯರೇ,

ಬೆಂಗಳೂರು ಆಕಾಶವಾಣಿಯವರಿಗೂ, ಶ್ರೀ ಸೂರ್ಯನಾರಾಯಣರಿಗೂ ಈ ಮೂಲಕ ಧನ್ಯವಾದಗಳನ್ನರ್ಪಿಸುತ್ತಾ, ಕನ್ನಡದಲ್ಲಿ ಕಾಮೆಂಟರಿ ಕೇಳಿದುದು ನಮ್ಮ ಪೂರ್ವಜರ ಆಶೀರ್ವಚನ ಫಲವೆಂದು ಬಗೆಯುತ್ತೇವೆ. ಕಾಲ ಕೆಟ್ಟಿಲ್ಲ ಎಂದು ಖಂಡಿತವಾಗಿ, ಕೈ ಎತ್ತಿ, ಹೇಳಲಿಚ್ಛಿಸುತ್ತೇವೆ. ಹಿಂದೆ 35 ರೂಪಾಯಿಗೊಂದು ಸೈಕಲ್ ಸಿಕ್ಕುತ್ತಿತ್ತು ನಿಜ. ಆದರೆ ಆಗ ಕನ್ನಡ ಕಾಮೆಂಟರಿ ಕೇಳಸಿಗುತ್ತಿತ್ತೇ?

ಆದರೆ ಮಹಾಪ್ರಭು, ಆ ಕಾಮೆಂಟರಿ ಒಗ್ಗರಣೆ ಇಲ್ಲದ ಹೂರಣದ ಸಾರಿನಂತಿತ್ತು; ಕರಿಬೇವು ಹಾಕಿದ ಹಾಗೂ ಕಾಣಲಿಲ್ಲ. ಶ್ರೀಯುತರ ಮನಸ್ಸಿನಲ್ಲಿ ಸೊಳ್ಳೆಗಳಂತೆ ಹುಟ್ಟಿದ ಪದಗಳು, ನಾಲಿಗೆಯವರಿಗೆ ಕಬ್ಬಕ್ಕಿಗಳಂತೆ ಹಾರಿ ಬಂದು, ಗಂಟಲಿನಲ್ಲಿ ಭಾರತೀಯ ರೈತನ ಭಾಗ್ಯದಂತೆ ಇಂಗಿಹೋಗುತ್ತಿದ್ದವು.

ಶ್ರೀಯುತರಿಗೆ ಕಡಲೆ ಇತ್ತು. ಹಲ್ಲಿರಲಿಲ್ಲ ಅಂದರೆ ಕ್ರೀಡಾ ಪರಿಚಯ ಧಾರಾಳವಾಗಿತ್ತು. ಪದಸಂಪತ್ತು, ವಚನಕೌಶಲ ಭಾರತದ ಬಡ್ಜೆಟ್ಟಿನ ಹಾಗಿರುವಂತೆ ತೋರಿತು. ಅವರನ್ನು ಟೀಕಿಸುತ್ತಿಲ್ಲ. ಆದರೆ ಅವರ ವಾಗ್ಧಾರೆ ವೇಗದಿಂದ ಹರಿಯಲಿಲ್ಲವಲ್ಲಾ ಎಂಬುದೇ ನಮ್ಮ ಸಂಕಟ. ಕನ್ನಡದಲ್ಲಿ ಕಾಮೆಂಟರಿ ಭಾಷೆ ಪಳಗಬೇಕಾಗಿದೆ. ಆ ದಿಶೆಯಲ್ಲಿ ಶ್ರೀಯುತರ ಭವಿಷ್ಯ ಮಾರ್ಗದರ್ಶನಕ್ಕಾಗಿ, ಅಲ್ಲ ಅವಗಾಹನೆಗಾಗಿ ಕೆಳಗೊಂದು ಕಾಮೆಂಟರಿಯನ್ನು ಕೊಟ್ಟಿದೆ.

ಶ್ರೀಯುತರಿಗೆ ಮುಗಿಲುಹಳ್ಳಿ ಸ್ಪಿರಿಟ್ ಸ್ವಲ್ಪ ಬರಲಿ ಅದರ ಒರಟುತನ ಬರಬೇಕಿಲ್ಲ. ಕೆಲವಿಷಯಗಳನ್ನು ಭವಿಷ್ಯತ್ತಿನ ಕಾಮೆಂಟರೀ ಕರ್ತರು ತಿಳಿಯಬೇಕು. 'ಕನ್ನಡ ಕಾಮೆಂಟರಿ ಇಂಗ್ಲಿಷ್ ಕಾಮೆಂಟರಿಯ ಭಾಷಾಂತರವಲ್ಲ. ಅದು ವರದಿಯಲ್ಲ. ಶ್ರೋತೃವಿನೊಡನಾಡಿದ ಮಾತು. ಎಲ್ಲ ಸಂದರ್ಭದಲ್ಲೂ ಬಹುವಚನದ ಆವಶ್ಯಕತೆಯಿಲ್ಲ. ವಿಕೆಟ್ ಬೀಳಿಸಿದಾಗ, ಕ್ಯಾಚ್ ಹಿಡಿದಾಗ, ಬೌಂಡರಿ ಬಾರಿಸಿದಾಗ ಏಕವಚನ ಸಾಕು. ಕ್ಯಾಚ್ ಬಿಟ್ಟಾಗ ವಿಕೆಟ್ ಕಳೆದುಕೊಂಡಾಗ ಬಹುವಚನ ಇರಲಿ.

ಮುಗಿಲುಹಳ್ಳಿ ಪೆವಿಲಿಯನ್; ಮರ್ಚೆಂಟ್ಸ್ Vs. ಕಾಲೇಜ್ ಬಾಯ್ಸ್ ಮ್ಯಾಚು; ಕಾಮೆಂಟ್ರಿ ಮಾಡುವವರು ಗಂಗಾಧರೈಂಗಾರ್.

ಮ್ಯಾಚ್ ಮಗ್ಗಕ್ಕೆ ಇನ್ನಿಪ್ಪತ್ನಿಮ್ಷದೆ. ಗಾಳಿದ್ದದೆ, ಸೇಂಗಾ, ಹತ್ತಿ ಧೂಳು; ಆ ಬೀಡಿ ಎಂಡಿನಾಗೆ ಅಂಪೈರ್ ಎಚ್ರ ತಪ್ಪಿ ಬಿದ್ದದನೆ.

ನೀವೇನಾರ ಈಗಿನ್ನೂ ರೇಡಿಯೋ ಹಚ್ಚಿದ್ರೆ, ಮಿಕಿಮಿಕಿ ಕುತ್ಗಬ್ಯಾಡ್ರಿ. ಸ್ಕೋರ್ಗಿಲ್ಲಿಲ್ಲ ಇವ್ನು ಅನ್ನಬ್ಯಾಡ್ರಿ. ಹೇಳ್ತಿನಿ.

ಮರ್ಚೆಂಟ್ಸ್ ಫಸ್ಟ್ ಇನಿಂಗ್ಸ್ 99. ಅವರ್ಪೈಕಿ ಬಕ್ಕ-23, ಶೆಟ್ಟಿ-21. ಬೌಲಿಂಗ್ ತಗಂಡ್ರೆ, ಕಾಲೇಜಿನ ಮಲ್ಲ 6 ವಿಕೆಟ್ ಎಗರಿಸಿದ. ಇನ್ನೂ, ಇಬ್ರಿಗೆ ಕಾಲ್ಮುರ್ದ.

ಈಗ, ಕಾಲೇಜ್ ಹುಡ್ರು ಅಡ್ತಾ ಅದರೆ. ಬಸ್ಯ 14 ನಾಟೌಟ್, ರಾಜ್ಗ-11 ನಾಟೌಟ್....ಕೊಟ್ರಗೆ 5 ವಿಕೆಟ್ ಸಿಕ್ವು. ಕಾಲೇಜ್ ಟೋಟ್ಲು 8 ವಿಕೆಟ್ಗೆ 86 ರನ್ನು.

ಇನ್ನು ಈ ಅಂಪೈರ್ ಯಾಕೆ ಸೆಟ್ಗಂಡ ಅನದನ್ನ ಕೇಳ್ರಿ. ಬಸ್ಯ ಆದನಲ್ಲ, ನಮ್ಮೂರಿನ Broadman, ಅವ್ನ ಶುದ್ಧ ಕೊಲ್ಟಿಮಾವ. ಈಗೊಂದೈದ್ನಿಮ್ಷ ದ್ಕೆಳ್ಗೆ ಬಕ್ಕ ಬಾಲೊಗ್ದ ಅವ್ನಿಗೆ. ಅದೊಂದ್ಹದ್ನೈದಡಿ ಬ್ರೇಕಾತು. ಅದೆಂಥ ಬ್ರೇಕೋ ಆ ಬಕ್ನೇ ಬಲ್ಲ. ಬಸ್ಯ ಆ ಬಾಲ್ನ ಬಿಡ್ಬಾರ್ದೇ ಅದನ್ನ ಬೆನ್ಹತ್ತಿ ಹೋಗಿ, ಬಾಲ್ಹೊಡ್ಯದು ಬಿಟ್ಟು, ಬಾರಿಸ್ದ ಆ ಅಂಪೈರ್ ತಲೇನ. ಅಂಪೈರ್ ಸೆಟ್ದ.



ಹಂಗ್ಹೊಡ್ದದ್ದೂ ಸರೀನೇ ಬಿಡ್ರೀ. ಆ ಅಂಪೈರ್ ಮರ್ಚೆಂಟ್ಸ್ ಪಾರ್ಟಿ ಕಾಲೇಜ್ ಸೈಡಿನ ಎಂಟ್ನೇ ವಿಕೆಟ್ ರಾಮ್ಗಂದು ಹೆಂಗ್ಬಿತ್ತು ಗೊತ್ತೇ? ಬಕ್ಕ ಒಸ್ದ ನೋಡ್ರಿ ಆ ಬಾಲ್ನ. ಅದು ಒಂದ್ಹದ್ನೈದಡಿ ಪರ್ಪೆಂಡಿಕ್ಯುಲರ್ ಬ್ರೇಕಾತು. ರಾಮ್ಗ, ಒಂದು ಬೌಂಡ್ರಿ ಕುಟ್ಟಣ ಅಂತ ಹೋದ. ಹೆಂಗೋ ಏನೋ ಆ ಬಾಲು ರಾಮ್ಗನ್ಕಾಲ್ಗೆ ಬಿತ್ತು. ಬಕ್ಕ 'ಔಜ್ಯಾಟ್' ಅಂತ ಹೊಯ್ಕಂಡ. ಈ ಅಂಪೈರ್

‘ಹೌಟ್’ ಅಂದ್ಬಿಟ್ಟ. ಅದು LBW ಅಂತೆ. ಇಂಥಗುಲ್ಲು ನಮ್ಮೂರ್ನಗೆ ಅಂಪೈರಂತೆ. ಕಾಲೇಜ್ಮೇಷ್ಟರ್ನ ಹಿಡ್ಕಂಬಂದು ನಿಲ್ಸದ್ಬಿಟ್ರು, ದಲಾಲಿ ಅಂಗ್ಡಿ ಗುಮಾಸ್ತರ್ನ ನಿಲ್ಸಿದ್ರೆ ಆಗದ್ದಿಂಗೇ ನೋಡ್ರಿ. ಪುಂಡಕ್ಕೆ ಉಪ್ಪು ತಿನ್ನಕ್ಲಾಯಕ್ ಇವ್ರು.

ಅಂಪೈರ್ ಕಣ್ಬಿಟ್ಟ. ಭಂಡ! ಲೇ, ಹೋಗೋ, ರೇಡಿಯೋದಗೆ ಬೊಂಬೈ ರೇಟು ಬರ್ತವೆ ಕೇಳ್ಕೋಗು.

ಬಕ್ಕ ಬೀಡಿ ಎಂಡಿನಿಂದ ರಾಜ್ಗನಿಗೆ, ಬೌಲ್ ಮಾಡದ್ರಗದನೆ ಓ! ಆತಪಾ ಇವತ್ತಾಟ. ಆ ಗುಡಿ ಕಡೆಯಿಂದ ಒಂದಿಪ್ಪತ್ತೈದ್ಮಂದಿ ಕರಗ್ಳು ಕ್ರಿಕೆಟ್ ಆಡನಾ ಅಂತ ಪಿಚ್ಕಡ್ಗೆ ಬರ್ತಾ ಅವೆ. ಆ ಕಾಲೇಜ್ಮೇಷ್ಟ್ರು, ಅವನ್ನ ಹುಶ್ ಹುಶ್ ಅಂತ ಓಡ್ಸಕ್ಕೆ ಹೋದ. ಅವೇನು ಬೆಕ್ಕಿನ್ಮರಿಗ್ಳೆ? ನೋಡ್ರಿ ಅವ್ನು ಅಂಪೈರ್ ಆಗಕ್ಲಾಯಕ್ಕು. ಈ ಅಂಪೈರ್ ಎಮ್ಮೆ ಕರ ಓಡ್ಸಕ್ಲಾಯಕ್........

ಇರ್ಲಿ. ಇತ್ಲಗೆ ಆಟ ಷುರ್ವಾತು. ಬಕ್ಕ to ರಾಜ್ಗ. ಷಾರ್ಟ್ ಪಿಚ್ ಬಾಲು. ರಾಜ್ಗ ಅದ್ನ ನಿಲ್ಸಿದ. ಎರಡ್ನೇ ಬಾಲು—ಅದೇ ಹಣೇಬರ. ಮೂರ್ನೇ ಬಾಲು ಬಕ್ಕ to ರಾಜ್ಗ. ಓ ಪಿಂಡ ಈ ಬಾಲು. ರಾಜ್ಗ ಅದನ್ನೊಡ್ದ ನೋಡ್ರಿ ರಗ್ ಕಿತ್ಕೋಗಿರ್ಬೇಕು. ಬಕ್ಕ “ನೆಲ್ಕಟ್ಕೋಲ್ ಉಫಿ ತುದಾಂಡಲ್ ಸ್ಕೋರ್ ಬಿಡ್ತಿಯೋ ಆಟ ಬಿಡ್ತಿಯೋ” ಅಂತ ನಿಂತ್ಬಿಟ್ಟ. ರಾಜ್ಗ “ಲೇ ಬಕಣಾ, ಇದು ಚಿನ್ನಿದಾಂಡ ಅಲ್ಲೋ” ಅಂದ. ನಾಕ್ನೇ ಬಾಲು ಬಕ್ಕ to ರಾಜ್ಗ. ಹ ಹ ಹ ಹ ಹ....ಮಜಾ ಅಂದ್ರಿದಪ್ಪ. ಬಕ್ಕ ಬಾಲ್ಹಿಡ್ಕಂಡು ಸೀದ ಬ್ಯಾಟ್ಸ್‌ಮನ್ ಎಂಡ್ ತನ್ಕ ಓಡ್ಕೋದ. ಅಲೇ ಬಕ್ಕಾ ಹತ್ತಿಕಾಳ್ಕೊಗ್ಸೋಗೋ. ಏನ್ಕಾಮೆಂಟ್ರಿ ಮಾಡ್ಲಿ ನಾನು ಆಟ ಇದ್ರಲ್ಲೇ?........

ಆಟ ಗರಂ ಆತಪಾ. ಬೌಲಿಂಗ್ ಛೇಂಜ್. ಬೀರೀದೇವ್ರಗುಡಿ ಎಂಡಿನಗೆ ಕೊಟ್ರ ಬಂದ. ಕೊಟ್ರ to ಬಸ್ಯ.



ಕೊಟ್ರ ನಮ್ಮೂರಿನ ಲಿಂಡ್ವಲ್. ಬಸ್ಯ ಮೊದ್ಲೇ ಅಂಥಂಗೆ ನಮ್ಮೂರಿನ Broadman. ಕೊಟ್ರನಪ್ಪ ಮಿಲ್ಟ್ರಿ ಒಳ್ಗಿದ್ದ. ಅದಕ್ಕೇ ಅವನ್ಬಾಲುಗ್ಳು ಗುಂಡ್ಬಂಥಂಗೆ ಬರ್‍ತವೆ. ಬಸ್ಯನಪ್ಪ ಗಾಡಿ ಹೊಡಿತನೆ. ಗಾಡಿ ಬಸ್ಯ ಅಂತರವನ್ನ. ಅವ್ನೇಟು ಬಾರ್‍ಸ್ಕೋಲ್ನೇಟಿದ್ಧಂಗೆ. ಕೊಟ್ರ to ಬಸ್ಯ. ಕೊಟ್ರ ಓಡ್ಬರ್‍ತಾ ಅದನೆ —ಬಂದಾ—ಬಂದಾ.

ಓ ಅವನ್ಕಾಲೇನೋ ಚುಚ್ಕಂತು. ಕೊಟ್ರ ಕುಂಟ್ಗಂತ ಬಂದ. ಲೇ ಇದು ಕುಂಟಪಿಲ್ಲಿ ಅಲ್ಲೋ ಕೊಟ್ರಾ. ಕೊಟ್ರ ಬೌಲ್ಮಾಡ್ದ. ಬಾಲು ಫಾಸ್ಟಾಗಿಲ್ಲ. ಈ ಸೀಬಾಲು. ಸುಲ್ದ ಸೇಂಗಾ ಕಾಳಿನ್ಹಂಗದೆ.

ಓ ಬಸ್ಯ ಕಡ್ಕಂಬಿದ್ದ. ಬಸ್ಯಗೆ, ಆ ಬಾಲು ಕಂಡ್ತೊ ಇಲ್ಲೋ. ಬೀಸ್ದ ಬ್ಯಾಟ್ನ. ಗಾಳಿ ಗುದ್ದಿ ಕಡ್ಕಂಬಿದ್ದ. very good, ವಹ್ವಾ ಇರ್ಬೇಕ್ಹಂಗೆ ವಿಕೆಟ್‌ಕೀಪರ್ ಅಂದ್ರೆ, ಒಂದ್ಚಂಪು ನಿದ್ದೆ ತಗಿತಿದ್ದ ಅವ್ನು. ಬಾಲು ಬೌಂಡ್ರಿ ಗ್ಹೋತು. ಈ ಬೈ ಬೌಂಡ್ರಿ ಸೇರಿ ಕಾಲೇಜ್ ಟೋಟಲ್ 90 ಆತು ಲೇ ಬಸ್ಯ ಗಾಡಿ ಹೊಡಿಹೋಗು ಸ್ವಾದೆ, ಅಂಥ ಬಾಲು ಹೊಡಿದಿದ್ರೆ ಯಾತಕ್ ಹುಟ್ಬೇಕೋ. ಇನ್ನು ಇವ್ನು ವಿಕೆಟ್ ಕೀಪರ್ ಅಂದ್ನೆಲ್ಲಾ, ಅವ್ನು ಛತ್ರಕ್ಕೆ ವಾಚ್‌ಮನ್ ಆದ್ರೆ ಛಂದ.

ಕಾಲೇಜ್ನರು, ಇನ್ಹತ್ರನ್ನು ಕುಟ್ಟಿದ್ರೆ, ಮರ್ಚೆಂಟ್ಸ್ ಗುಡ್ಹಾಪೆ ಕಟ್ಗಂಥು ಸೇಂಗಾ, ಹತ್ತಿ ತೂಗ್ಸಕ್ಕೆ ರೆಗ್ಯುಲೇಟೆಡ್ ಮಾರ್ಕೆಟ್ಗೆ ಹೋದಂಗೇ.

ಬಾಲು ವಾಪಸ್ಬಂತು. ಕುಂಚಾಪಿಲ್ಲಿ ಕೊಟ್ರ to ಗಾಡಿ ಬಸ್ಯ. ಬಾಲ್ ಒಸ್ತ. ಬರ್‍ತಾ ಅದೆ ಬಾಲು ಹಳ್ಳಿಗೌಡ ದಲಾಲ್ರಂಗ್ಡಿಗೆ ಬಂಥಂಗೆ.

ಹಕ್ಕಲೆ ಬಸ್ಯ, ಹಕ್ಕೋ, ಕುಟ್ಟೋ, ಬಿಗ್ಯೋ, ಬಾರ್‍ಸ್ಲೋ, ಓ! ಬಾರಿಸ್ದ! ಒಂದ್ ಸಿಕ್ಸರ್! ಭಲಾ! ವಹ್ವಾ!! ಅಯ್ಯಯ್ಯೋ ಇಲ್ರೋ. ಬಾಲು ತುಕ್ಡ ತುಕ್ಡ. ಕುಂಬ್ಳಕಾಯಿ ಒಡಥಂಗಾತು. ಲೇ ಮಾಧೇವಾ, ಎಷ್ಟ್ ರನ್ನೋ ಅದ್ಕೇ? ಇಲ್ಲೇ? ಶನಿಹೋಕ್ಬಿಡು. ಕಾಲೇಜ್ ಟೋಟ್ಲು ಇನ್ನೂ 90........

ಬೆಣ್ಣೆಹಳ್ಳಿ ಮೃತ್ಯು ಹೊಸ್ಬಾಲು ಕೊಟ್ಬಂದ ಕೊಟ್ರಗೆ. ಕೊಟ್ರ ನಾಲ್ಕು ರಿಪೇರಿ ಆಗೆತೆ.

ಮಿಲ್ಟ್ರಿ ಕೊಟ್ರ to ಗಾಡಿ ಬಸ್ಯ. ಕೊಟ್ರ ಬಾಲ್ತಗಂಡ. ಹಂಗೆ ಬೊಂಬೈ ಲಾರಿ ಬಂಥಂಗೆ ರೊಯ್ ಅಂತ ಬರ್‍ತಾ ಅದನೆ. ತಗ್ಯೋ ನಿನ. ಇವ್ನೆದ್ರಿಗೆ ಟ್ರೈಸನ್ನೂ ಇಲ್ಲ, ಲಿಂಡ್ವಾಲೂ ಇಲ್ಲ, ಕಸ್ತೂರಿನೂ ಇಲ್ಲ. ಬಂದಾ-ಬಂದಾ-ಒಗ್ದ.

ಅಯ್ಯಯ್ಯೋ ನೆಗ್ದ್‌ಬಿದ್ನೋ ಬಸ್ಯ. ಹ್ವಾದ ಮಗ. ಸತ್ತ. ತಿಂದ. ಅವ್ರಪ್ಪ ಅಮ್ಮನ್ಗತಿಯೇನಪ್ಪ!

ಸದ್ಯ ಸತ್ತಿಲ್ಲ. ಇನ್ನೂ ಕುಟುಕುಟು ಅಂತದೆ. ಕರ್‍ದ್ಹೊಯ್ಕಂಥಂಗೆ ಹೊಯ್ಕಂತನೆ.

ಅ ಲ ಲ ಲ ಲ ಲ ಲಾ........ಏನ್ಬಾಲಪ ಅದು. ಫಾಸ್ಟ್ ಬೌಲರ್ ಇಲ್ಲ ಅಂತ ಯಾಕ್ಪಡ್ಕಂತಿದ್ದಾರು ನಮ್ಮಿಂಡಿಯನ್ಸ್. ಈ ಕೊಟ್ರನ್ನ ಹಿಡ್ಕಂಥೋಗ್ಬಾರ್‍ದಿ? ಬಸ್ಯನ್ಹೆಣ ಹೊತ್ಗಂಬರ್‍ತಾ ಅಂದರೆ. ನಾಕ್ಜನ ಸಾಲ್ದೇ ಸಾಲ್ದು ಈ ಬ್ರಾಡ್ಮನ್ಗೆ.

ಹೆಂಟಿಗೊದ್ದ ಪಿಚ್‌ಕಡೆಗೆ ಹೋಗ್ತಾ ಅದನೆ. ಹಿಟ್ ಇಟೌಟ್ ಹೆಂಟಿಗೊದ್ದ! ಅಂತ ಕಾಲೇಜ್ ಹುಡ್ರು ಒಡ್ಕಂತಾ ಅವೆ.

ಕಾಲೇಜ್ ಟೋಟಲ್ ಇನ್ನೂ ತೊಂಬತ್ತೆ. ಆಟ ಮುಗ್ಯಕ್ಕೆ ಇನ್ನಾರ್‍ನಿಮ್ಸ ಅದೆ.

ಕೊಟ್ರ to ಹೆಂಟಿಗೊದ್ದ. ಅ ಬ ಬ ಬ ಏನ್ ಫಾಸ್ಟ್ ಬಾಲಪಾ! ಕಾಣಕ್ಕೇ ವಲ್ದು. ಹೆಂಟಿಗೊದ್ದ ಕಿತ್ತಾ ಪಾರು. ವಿಕೆಟ್ ಕೀಪರ್ ಆ ಬಾಲ್‌ಹಿಡ್ದ. ವಿಕೆಟ್ ಕೀಪರ್‌ಗೂ ವಿಕೆಟ್ಗೂ ನಡ್ವೆ ಒಂದೆರ್‍ಡು ಫರ್ಲಾಂಗ್ ನೆಲ ಅದೆ. ಜೀವಗಳ್ಳ ಅಂದ್ರೆ ಥೇಟ್ ಜೀವ್ಗಳ್ಳ.

ಎರ್‍ಡನೇ ಬಾಲು. ಕೊಟ್ರ ಟು ಹೆಂಟಿಗೊದ್ದ. ನೋ ಬಾಲ್. ಆ ಕುರಿ ಮತ್ತೆ ಕಿತ್ತಾ ಪಾರು. ಟೋಟಲ್ 91.

ಕೊಟ್ರ ಟು ಹೆಂಟಿಗೊದ್ದ. ಓವರ್‍ನಗೆ ಲಾಸ್ಟ್‌ಬಾಲ್ ಇದು. ಒಗ್ದ ಕೊಟ್ರ. ಓ ವಿಕೆಟ್ ಹಾರ್‍ಹೋತು.

ನೋಡ್ರಿ ಆದಿಂಗೆ. ಈ ಹೆಂಟಿಗೊದ್ದ ಬ್ಯಾಟ್ ಎತ್ತದ್ರಗೆ ಕೊಟ್ರನ್ಬಾಲು ಅದಕ್ಬಡ್ದು, ಬೌಲರ್ ಎಂಡ್ ವಿಕೆಟ್ ಠಳ್ ಅಂಥೋತು. ಹೆಂಟಿಗೊದ್ದ ಹುರ್‍ರೇ ಅಂತ ಪೆವಿಲಿಯನ್ ಕಡ್ಗೆ ಓಡ್ಬಂದ. ಯಾಕೋ ಅಂದ್ರು. ಕೊನೇ ಹೊಡ್ತಕ್ಕೆ 21 ರನ್ ಆತು ಕಾಲೇಜ್ ಮಾರ್‍ರ್‍ಯಾ, ಅಂದ ಹೆಂಟಿಗೊದ್ದ. ಏಚ್ ಕೈಸ ಹೋತಾ ಅಂತ ಮರ್ಚೆಂಟ್ಸ್ ಕೂಗ್ತಾ ಆದರೆ. ಹೆಂಟಿಗೊದ್ದ ವೈಸಾಚ್ ಅಂತ ಕೂಗ್ದ.

ಮಾರಾಮಾರಿಗಾರಂಭಾಗ್ಯದೆ ಅಲ್ಲಿ. ಹೊಡ್ದಾಡ್ಲಿ ಬಿಡ್ರಿ. ಇಂಥಾ ಕ್ರಿಕೆಟ್ಗಂತ ಬಡದಾಟಾನೇ ನೋಡಕ್ ಛಂದ

ಟೈಮಾತು. ಮ್ಯಾಚ್ ಡ್ರಾ ಆತು.

ಮುಗಿಲುಹಳ್ಳಿ ಪೆವಿಲಿಯನ್; ಕ್ರಿಕೆಟ್ ಕಾಮೆಂಟರಿ ಮುಗಿಯಿತು.

—ಅ. ರಾ. ಸೇ.

ಆಸೆಯ ಅಂತ್ಯ

ಇನ್ನೂರು ರೂಪಾಯಿಗೆ ಆಸೆ ಪಟ್ಟಿದ್ದೇ ಬಂತು, ಗ್ರಹಚಾರ. ಇಲ್ಲದಿದ್ದರೆ, ಚಿಕ್ಕಣ್ಣನ ಮನೆ ಮುಂದೆ, ಊರಿನ ಬಸ್ ಸ್ಟಾಂಡ್ ಸ್ಥಾಪನೆಯಾಗುತ್ತಿರಲಿಲ್ಲ. ಅಲ್ಲಿಂದ ಕ್ರಮಕ್ರಮವಾಗಿ ಪ್ರಾರಂಭವಾದ ತಾಪತ್ರಯ ಪರಂಪರೆಗಳು ನಡೆಯುತ್ತಿರಲಿಲ್ಲ. ಆದರೂ, ಚಿಕ್ಕಣ್ಣನಿಗೆ, ಯಾವುದೋ ಕೆಟ್ಟ ಗಳಿಗೆಯಲ್ಲಿ, ಆ ಇನ್ನೂರು ರೂಪಾಯಿ ಗಳಿಸುವ ಹಾಳು ಯೋಚನೆ ತಲೆಹೊಕ್ಕು, ತಾನೇ ಮುನಿಸಿಪಲ್ ಆಫೀಸಿಗೆ ನಡೆದುಹೋಗಿ, ತನ್ನ ಮನೆ ಮುಂದಿನ ಎಂಟಡಿ ಜಾಗವನ್ನು ಆ ಮುನಿಸಿಪಲ್ ಜಾಗಕ್ಕೆ ಸೇರಿಸಿಕೊಳ್ಳಲು ಅನುಮತಿ ಇತ್ತ .... ಇದರಿಂದಾಗಿ ಬಸ್ ಸ್ಟಾಂಡ್ ತನ್ನ ಮನೆ ಮುಂದೆಯೇ ಬಂತಲ್ಲಾ, ಎಂದು ಆನಂದಪಟ್ಟ.

ಮಾರನೆಯ ದಿನದಿಂದ, ಮನೆ ಮುಂದೆ, ಧೂಳು! ಆಮೇಲೆ, ಗಲಾಟೆ, ಗಲಭೆ, ಗದ್ದಲ! ಕಿಸೆ ಕತ್ತರಿಸುವವರ ತಂಡ ಏಳೆಂಟು. ಆ ತಂಡಗಳ ಸದಸ್ಯರಲ್ಲಿ ವೈಮನಸ್ಯ. ಹಂಚಿಕೆ ನೀತಿಯಲ್ಲಿ ವೈಷಮ್ಯ, ಇದರಿಂದಾಗಿ, ಮಾರಾಮಾರಿ. ಚಿಕ್ಕಣ್ಣನಿಗೆ ಬೇಜಾರಾಗಿಹೋಯಿತು.

ಒಂದು ವಾರದೊಳಗೆ, ಅವನ ಮನೆ ಎದುರು ಮೂರು ಹೋಟೆಲುಗಳು ಬಂದುವು .... ಮೂರರಲ್ಲೂ ರೇಡಿಯೋಗಳು. ಒಂದಕ್ಕಿಂತ ಒಂದು ಅಪಸ್ವರ, ರಾಕ್ಷಸೀಯ! ಚಿಕ್ಕಣ್ಣನ ಕಿವಿಯಲ್ಲಿ ಕೀವು ಸೋರಿತು. ಒಂದು ತಿಂಗಳೊಳಗಾಗಿ ಅವನ ಮನೆ ಸಾಲಿನಲ್ಲೇ ಆರು ಪೆಟ್ಟಿಗೆ ಅಂಗಡಿಗಳು–ಬೀಡಿ, ಸಿಗರೇಟು, ತಂಬಾಕು, ಸೋಡ, ಲೈಂ ಜೂಸು ಇತ್ಯಾದಿಗಳನ್ನು ಮಾರುವ ಅಂಗಡಿಗಳು ಪ್ರಾರಂಭವಾದುವು. ಅವುಗಳನ್ನು ಪ್ರಾರಂಭಮಾಡಲು ಮಾನ್ಯ ಮಹನೀಯರುಗಳು ಬಂದಾಗ, ವೈಭವಯುತವಾದ ಸಮಾರಂಭಗಳು ಬೇರೆ....ಅಂದರೆ ತೆಪ್ಪಗೆ ಕುಳಿತಿದ್ದ ಚಿಕ್ಕಣ್ಣನಮೇಲೆ, ಹತ್ತಾರು ಕಪ್ಪೆಗಳು ಬಿದ್ದುವು, ಅನ್ನಿ!

ಈ ಗದ್ದಲಗಳು ಚಿಕ್ಕಣ್ಣನ ಕಾಂಪೌಂಡಿನೊಳಕ್ಕೂ ನುಗ್ಗಿದುವು! ಒಬ್ಬ ರಿಪೇರಿದಾರ ಅವನನ್ನು ಕಂಡು, ಸ್ವಾಮಿ, ನಿಮ್ಮ ಕಾಂಪೌಂಡಿನೊಳಗೆ ಒಂದು ಷೆಡ್ ಹಾಕಿಕೊಳ್ಳುತ್ತೇನೆ .... ಆ ಗೇಟ್‌ನ ಕೊಂಚ ದೊಡ್ಡದು ಮಾಡಿಕೊಳ್ಳುತ್ತೇನೆ.... ತಿಂಗಳಿಗೆ ಇಪ್ಪತ್ತೈದು ರೂಪಾಯಿ ಬಾಡಿಗೆ ಕೊಡುತ್ತೇನೆ, ಎಂದ. ಅರ್ಧಜ್ಞಾನದಲ್ಲಿ ಚಿಕ್ಕಣ್ಣ 'ಹೂಂ' ಅಂದ. ಸರಿ! ಅವನ ಹೊಡೆತ—ಸುತ್ತಿಗೆ ತೆಗೆದು ಕಬ್ಬಿಣಕ್ಕೆ....

ತಿದಿ ಒತ್ತುವುದು ಬೇರೆ, ಬುಸ್ ಬುಸ್ ಅಂತ....ಗಲಾಟೆಯೋ ಗಲಾಟೆ! ಲಾರಿ ಬಸ್ಸುಗಳು ಒಳಕ್ಕೆ ಬಂದು, ಕಾಂಪೌಂಡು ಗೋಡೆಯನ್ನೇ ಉರುಳಿಸಿದುವು ಅಂಗಳ ದಲ್ಲಿದ್ದ ಗಿಡಗಳೆಲ್ಲ ಚಟ್ನಿ. ಸಂಪಿಗೆಮರ ಕೂಡ, ನೆಲಕ್ಕೊರಗಿತು.

ಆ ಷೆಡ್‌ನವನ ಸೋದರಮಾವನಂತೆ, ಮತ್ತೊಬ್ಬ! ಅವನೊಂದು ದಿನ ಚಿಕ್ಕಣ್ಣನ ಹತ್ತಿರ ಬಂದ. "ಏನ್ರಿ! ಬುದ್ಧಿ ಗಿದ್ದಿ ಇದೆಯೋ? ನೀವೇನ್ರಿ ಊಟ ಮಾಡೋದು? ಆ ಬಕ್ರಾಗೆ ಜಾಗ ಕೊಟ್ಟಿದೀರಲ್ಲಾ ನಿಮ್ಮ ಕಾಂಪೌಂಡಿನಲ್ಲಿ! ನನ್ನನ್ನೊಂದು ಮಾತು ಕೇಳಬೇಡವೆ! ನಾನೇ ಹಾಕ್ತಿದ್ದೆ, ಒಂದು ವರಕ್‌ಷಾಪ್ನ! ಇರಲಿ, ಬಿಡಿ, ಈಗೇಕೆ ಅದರ ಮಾತು........ನನಗೂ ಕೊಡಿ, ಈಚೆ ಕಡೆ ಒಂದಿಷ್ಟು ಜಾಗ!" ಎಂದ. ಕೊಡದೆ ಇದ್ದರೆ ಸುಮ್ಮನೆ ಬಿಡಲಾರ ಧಾಂಡಿಗ ಅಂತ ತೋರಿತು, ಚಿಕ್ಕಣ್ಣಂಗೆ; ಕೊಟ್ಟ! ತೀರಿತು—ಇನ್ನೆಲ್ಲಿಯ ನಿದ್ದೆ, ಚಿಕ್ಕಣ್ಣನಿಗೆ!....ಸೋದರ ಮಾವ ಸೋದರ ಅಳಿಯ ಇಬ್ಬರೂ ಸೇರಿ ಅವರ ಲಾರಿಗಳು ಬಸ್ಸುಗಳು ಸಮೇತ, ಬಡಿತಗಳು ಹೊಡೆತಗಳು, ಉಗುಳು, ತೆಗಳು, ಇತ್ಯಾದಿಯಿಂದ ಚಿಕ್ಕಣ್ಣನ ಮನೆ ಆವರಣವನ್ನ ನರಕ ಮಾಡಿದರು.

ಹೋದ ತಿಂಗಳು ಒಬ್ಬ ಬಂದು, ಚಿಕ್ಕಣ್ಣನ ಮನೆಯ ಬಲಭಾಗವನ್ನೆಲ್ಲ 50 ರೂ. ಭಾಡಿಗೆಗೆ ತೆಗೆದು, ಅಲ್ಲೊಂದು ಹೋಟಲಿಟ್ಟ ...ರೇಡಿಯೋ ರಾಕ್ಷಸನನ್ನು ತಂದು ಗೋಡೆಗೆ ನೇತಾಡಿಸಿದ. ತಲೆನೋವನ್ನುಂಟುಮಾಡಿ ತಲೆನೋವಿನ ಔಷಧ ತೆಗೆದುಕೊಳ್ಳಿ—ಎಂದು ಕೂಗುವ ಕುಹಕ ವ್ಯಾಪಾರ ತಂತ್ರ ಆ ರೇಡಿಯೋದು!

ಎಡಗಡೆ ಕೋಣೆಯಲ್ಲೊಂದು ಬಸ್ ಕಂಪೆನಿಯವರು ತಮ್ಮ ಹರಿದುಹೋದ ಟೈರುಗಳನ್ನು ಜೋಡಿಸಿ, ಚಿಕ್ಕಣ್ಣನಿಗೆ 10 ರೂ. ಕೊಟ್ಟರು, ವರ್ಷಕ್ಕೆ....

ಚಿಕ್ಕಣ್ಣನಿಗೆ ಪಾಪ, ಶ್ವಾಸಕೋಶದ ತುಂಬ ಪೆಟ್ರೋಲು, ಕಿವಿ ತುಂಬ ಎಂಜಿನ್ ಸದ್ದು, ಕಣ್ಣು ತುಂಬ ಮುರಿದ ಲಾರಿ, ಬಾಯಿ ತುಂಬ ಭಿಕ್ಷುಕರನ್ನೋಡಿಸುವ ಬೈಗಳು ....ತನ್ನ ಸ್ವಂತ ಬಂಗಲಿಯಾದರೂ, ಅವನು ಅದನ್ನು ಅದರ ಹಿತ್ತಲ ಬಾಗಿಲಿಂದಲೇ ಪ್ರವೇಶಿಸುತ್ತಿದ್ದ. ಅವನ ಮಕ್ಕಳಂತೂ, ಅಚ್ಚಕನ್ನಡದ ಬೈಗಳನ್ನೆಲ್ಲ ಡ್ರೈವರ್ ಕಂಡಕ್ಟರುಗಳಿಂದ ಕಲಿತು ವಿದ್ಯಾವಂತರಾದರು! ಸುತ್ತ ಹತ್ತು ಹೋಟಲು ತಿರುಗಿ ಹೊಲಸು ತಿಂದು ಹೋರಿಗಳಾದರು! ಧೂಳು ಕುಡಿದು ಹೊಟ್ಟೆ ತುಂಬಿಸಿಕೊಂಡರು. ಮಸಿ ಬಳಿದ ಷರ್ಟು ಷರಾಯಿ ಧರಿಸಿ, ತಮಿಳು ಸಿನಿಮಾಗಳ ಹಾಡುಗಳನ್ನು ಹಾಡುತ್ತ, ಅವು ಸಂಜೆ ಮನೆಗೆ ಬಂದರೆ, ಚಿಕ್ಕಣ್ಣನಿಗೆ ನಾಚಿಕೆಯಾಗುವುದು, ಅವು ತಮ್ಮವು ಅಂತ ಹೇಳಿಕೊಳ್ಳೋದಕ್ಕೆ....

ಮೊನ್ನೆ....ಯಾಕೊ, ಏನೋ, ಚಿಕ್ಕಣ್ಣ....ಕಾಶಿಯಾತ್ರೆ ಹೊರಟ, ಸಂಸಾರ ಸಹಿತ. ನನಗೇನೊ ಅನುಮಾನವೆ, ಅವನು ಮತ್ತೆ ಆ ಮನೆಗೆ ಹಿಂತಿರುಗುವುದರಲ್ಲಿ.

—ಸಾ. ಶ.

ದಫೆದಾರ್ ದೇರಣ್ಣೋರು

"ಕಾ ಕಾ ರಾಜ"

"ಒಳ್ಳೇ ಹರ್ಸ ಮಂಡ್ಯದ ಹಸುವಿನ ತುಪ್ಪ ಇದೆಯೆ ಶೆಟ್ರೇ...."

—ಎಂದು ಕೇಳಿದಾಗ ಶೆಟ್ರು ತಲೆ ಎತ್ತಿ ನೋಡಿದರು. ಭವ್ಯವಾದ ಸರಳ ಮಗುವಿನ ಕಳೆ ಹೊತ್ತ ದೊಡ್ಡ ಧಡ್ಡ ಕೂಸಿನಂತೆ ನಿಂತಿದ್ದರು ದಫೇದಾರ್ ದೇರಣ್ಣೋರು.

ಆ ಶೆಟ್ರು ಜಾಣ ಧಡ್ಡರು.

ಈ ದಫೆದಾರು ಧಡ್ಡ ಜಾಣರು. ತುಪ್ಪ—ಬೆಣ್ಣೆಗಳ ವ್ಯಾಪಾರದಲ್ಲಿ ಹಳೇ ಕಾಲದಿಂದ ಬಡತನದಲ್ಲೇ ಬೆಳೆದು ಬ್ರಿಟಿಷರ ಯುದ್ಧಕಾಲದಲ್ಲಿ ಕೊಬ್ಬನ್ನೇ ಬೆಣ್ಣೆ ಎಂದು ಮಾರಿ, ಖದೀಮರಾಗಿ ಕೊಬ್ಬಿ ಹರುಕು ಹಾಸನ್ ಟೋಪಿಯಿಂದ ಜರೀ ಪೇಟಕ್ಕೆ ಬಂದು ಈಗ ಸಧ್ಯಕ್ಕೆ ಗಾಂಧಿ ಟೋಪಿಗೆ ಇಳಿದಿದ್ದರು ಶೆಟ್ರು. ಕಾಲ ಬದಲಾಯಿಸಿದಂತೆ ಅವರೂ ಬಣ್ಣ ಬದಲಾಯಿಸಿದ್ದರು. ಆದರೆ ಅವರ ಬೆಣ್ಣೆಯು ಮಾತ್ರ ಗ್ಯಾರಂಟಿಯಾದ ಅಪ್ಪಟ ಮಾಲೇ ಆಗಿ ಸಾಗಿಬಂದಿತ್ತು.

"ಬನ್ನಿ ದಫೆದಾರ್ರುಗಾರ್ಲ್ಲೊ....ಬನ್ನಿ....ಹ್ಯಾಗಿದೆ ನಿಮ್ಮ ಗೂರ್ಲು....ಅಂತಾ ಬಾಗುನ್ನಾರಾ .. ರಂಡಿ ರಾಂಡಿ"

—ಎಂದು ಕರೆದು ಸ್ವಾಗತ ಬಯಸಿದರು. ಬಂದರೆ ಕೂರಲು ಸ್ಥಳವಿಲ್ಲದ ಅವರ ಅಂಗಡಿ ಬರೀ ಎಣ್ಣೆ—ಬೆಣ್ಣೆ ಡಬ್ಬಗಳಿಂದ ಭಯಂಕರ ಜಿಡ್ಡುಮಯವಾಗಿತ್ತು. ಬಂದವರು ಕೂಡುವಂತೇ ಇಲ್ಲದ ಅವರ ಜಿಡ್ಡಿನಲ್ಲಿ, ಬರೀ ಬಾಯಿ ಉಪಚಾರದಲ್ಲೇ ಹೊಟ್ಟೆತುಂಬಿಸುತ್ತಿದ್ದರು ಶೆಟ್ರು. ಒಂದು ಗುಲುಗಂಜಿ ತೂಕ ಬೆಣ್ಣೆ ಖರ್ಚು ಮಾಡದೆ, ಬರೀ ಬಾಯಿಮಾತಿನ ನವನೀತವನ್ನೇ ತಲೆಗೆ ಸವರಿ ಬಂಗಲಾ ಕಟ್ಟಿದರು.

"ಒಳ್ಳೆ ಹರ್ಸ ಹಸುವಿನ ತುಪ್ಪ— ಮಂಡ್ಯದ್ದು ಆಗಬೇಕು ಇದೆಯೆ ?"

—ಎಂದು ಮತ್ತೆ ವಿಚಾರಿಸಿದರು.

"ಇಡೆ ದಫೆದಾರ್ರೇ—ಎಷ್ಟು ಬೇಕಾಗಿತ್ತು"

"ಒಂದು ವೀಸೆಗೆ ಎಷ್ಟು ?"

—ದಫೇದಾರ್ರು ಒಂದು ವೀಸೆ ತುಪ್ಪ ಕೊಂಡುಕೊಳ್ಳೋದು ಉಂಟೆ? ಕೊಳ್ಳೋದು ಇರಲಿ, ದಾಕ್ಷಿಣ್ಯಕ್ಕೆ ಸಾಲ ಸುರುವಿ ಯಾರು ಕೈಕಚ್ಚಕೋಬೇಕು? ಅಲ್ಲದೆ ಮೂರು ಮಿಳ್ಳೆ ತುಪ್ಪ ತಿನ್ನಲು ಹಿಂದುಮುಂದು ನೋಡುವ ಇವರು ಒಂದು ವೀಸೆ—ಹರ್ಸಣ ಮಂಡ್ಯದ ಹಸುವಿನ ತುಪ್ಪ!

"ಮನೇಲಿ ಏನು ವಿಶೇಷ ದಫೇದಾರ್ರೇ...."

"ಮನೇಗಲ್ಲ—ಆಫೀಸಿಗೆ...."

—ಶೆಟ್ರು ಸುಸ್ತು, ಆಫೀಸಿಗೆ ಬೆಣ್ಣೆ ಒಯ್ಯುವವರನ್ನು ಬಲ್ಲರು. ಇದೇನು ಈತ ಬೆಣ್ಣೆಯನ್ನು ಕಾಸಿದ ತುಪ್ಪವನ್ನೇ ಒಯ್ಯುತ್ತಿರುವ ಈತನ ಕಾಕಾತನ ಅತಿ ನವೀನವಿರಬೇಕೆಂದು ತರ್ಕಿಸಿದ ಶೆಟ್ಟರಿಗೆ ಹೊಸದೊಂದು ಗಿರಾಕಿ ಸಮೂಹವೇ ಕ್ಯೂನಿಂತ ಕನಸುಕಂಡಿತು. ಬೆಣ್ಣೆಗಿಂತ ತುಪ್ಪದಲ್ಲಿ ಲಾಭ ಹೆಚ್ಚು. ತಮ್ಮ ತಮ್ಮ ಆಫೀಸರುಗಳನ್ನು ಮೇಲಿಂದ ಮೇಲೆ ತಾಜಾವಮಾಡಲು ಮಾಮೂಲಿಯ ಬೆಣ್ಣೆಯ ಮಾರ್ಗವನ್ನು ಬಿಟ್ಟು ತುಪ್ಪದ ನವ್ಯಮಾರ್ಗ ಹಿಡಿದರೇ ಈ ತಾಬೇದಾರಿಯ ಮಂದಿ ಎಂದು ತರ್ಕಿಸಿ ಇದು ನಿಜವಾದರೆ ತಮ್ಮ ತುಪ್ಪದ ವ್ಯಾಪಾರ ಹೆಚ್ಚಿ ಮತ್ತೊಂದು ಮನೆ ದೊಡ್ಡಪೇಟೆಯಲ್ಲಿ ಕಟ್ಟಬಹುದೆಂಬ ಹೊಂಗನಸು ಕಂಡರು.

"ಹೌದೆ! ಆಫೀಸಿಗೇ!! ಇದೇಮಿ ಸ್ವಾಮಿ ದೇರಣ್ಣಗಾರ್ಲು ಮಾರು ಹೇಳೇದಿ"

"ಹೌದು ಶೆಟ್ರೇ ಹಸನ್ ಹಸುವಿನ ತುಪ್ಪದಲ್ಲಿ ಅಮೆರಿಕನ್ ಕೊಬ್ಬು ಎಷ್ಟಿದೇಂತ ಕಂಡುಹಿಡಿಯೋ ಆಫೀಸಿಗೆ....ಅರ್ಥವೆ!"

—ಶೆಟ್ರ ಹೊಂಗನಸಿಗೆ ಹೊಂಗೆ ಎಣ್ಣೆ ಕೂಡಿಸಿದಂತಾಯಿತು. ಶೆಟ್ರು ಬೆಬೆಬೆ ಎಂದು ತೊದಲಿದರು.

"ತಮಾಷಿ ಚೇಸ್ತಾರು ದಫೇದಾರ್ರಗಾರ್ಲು....ರೇ ಚಿನ್ನೋ—ಡಾ ಕಾಪಿ ಕಾಪಿ ಹೇಳ್ರಾ...."

—ಎಂದು ಕೂಗಾಡಿದರು. ದಫೇದಾರ್ರು ಅದೇ ಶಿಸ್ತಿನ ಪೋಲೀಸ್ ನೋಟದಿಂದ ಶೆಟ್ರನ್ನು ನೋಡಿದರು. ಇದು ತಮಾಷೆಗೆ ಕಾಲವಲ್ಲ ನಡೀರಿ ಕೇಸು ಮಾಡಿಸುವೆ ಇದಕ್ಕೆ ಸಂಬಂಧಪಟ್ಟ ಸ್ಯಾನಿಟರಿ ಇನ್ಸ್‌ಪೆಕ್ಟರಿಗೆ ಹೇಳಿ ಎಂಬ ನಿರ್ಧಾರವಿತ್ತು ಅವರ ಮಂಕು ಮುಖದಲ್ಲಿ. ಚಿನ್ನೋಡು ಕಾಫಿ ತಂದ ಬೆಣ್ಣೆ—ತುಪ್ಪದ ಡಬ್ಬಿಗಳ ಸಂದಿನಿಂದ ಒಳ ರೂಮಿನೊಳಕ್ಕೆ ಕರೆದೊಯ್ದರು ಶೆಟ್ರು.

ದಫೇದಾರ್ರು ಹಿಂಬಾಲಿಸಿದರು. ಶೆಟ್ರು ಹಾಸಿದ ಜಮಖಾನೆ ಒರದಿಂಬು ಹಾಸಿಗೆ ಉಳ್ಳ ಚಿಕ್ಕ ಚೊಕ್ಕ ಪಕ್ಕಾ ಏಕಾಂತದ ರೂಮಿಗೆ ದಫೇದಾರರನ್ನು ಸ್ವಾಗತಿಸಿದರು.

ಶೆಟ್ಟರು ಮಹಾ ಜಾರುವ ಇಸಮು. ಕಾಲದಿಂದ ಕಾಲಕ್ಕೆ ತಕ್ಕ ಬೆಣ್ಣೆ ತುಪ್ಪ ಗಳನ್ನು ಸಮಯೋಚಿತವಾಗಿ—ಸಂದರ್ಭೋಚಿತವಾಗಿ ಉಪಯೋಗಿಸಿದ ಅವರಿಗೆ ಈ ದ|| ದೇರಣ್ಣನವರ ಬೆದರಿಕೆ ಅಂಥಾ ಭಾರಿ ಸಮಸ್ಯೆಯಾಗಿ ಕಾಣಲಿಲ್ಲ.

ಆ ಬೆಣ್ಣೆ ವ್ಯಾಪಾರಿಯ ನಿಯಮ ನೀತಿಯ ಪ್ರಕಾರ ಯಾರನ್ನೂ ಎದುರು ಹಾಕಿಕೊಳ್ಳಬಾರದು. "ಅಂದರಿಕೂ ಮಂಚವಾಡು ಅನಂತರಾಮಯ್ಯಶೆಟ್ಟಿ" ಅನ್ನುವ ಸಂಪ್ರದಾಯದ ಮನೆತನದ ಕೀರ್ತಿಗೆ ಕಳಂಕ ತರುವವರಲ್ಲ. ಎಲ್ಲರ ತಲೆಗೂ ಬೆಣ್ಣೆ ಸವರಿ'ಕೊಬ್ಬು ತಿನ್ನಿಸಿ ತಮ್ಮಲ್ಲಿ ಕೊಬ್ಬು ಸೇರದಂತೆ ಮಾರುತ್ತಿದ್ದರು.

"ಕೂತ್ಗೊಳ್ಳಿ—ಕುಸೊಂಡಿ....ಗೂರ್ಲು ಎಷ್ಟ್ಲ ಉಂದಿ...."

"ಶೆಟ್ರೇ ನೀವು ತಲೆತಲಾಂತರದಿಂದ ಕನ್ನಡ ದೇಶದಲ್ಲಿರೋರು—ಇನ್ನು ಸರಿಯಾದ ಕನ್ನಡ ಮಾತಾಡಿ. ತೆಲುಗು ಮಾತಾಡ್ಲೇ ಬೇಕೂನ್ನೊದಿದ್ರೆ ಆಂಧ್ರ ದೇಶಾಂತ ನಿಮಗೇ ಬೇರೆ ಮಾಡಿಸಿದ್ದೀವಿ ಹೋಗಿ ಅಲ್ಲಿ ಬೆಣ್ಣೆಮಾರಬಹುದಲ್ಲಾ"

—ಎಂದು ದಫೆದಾರ್ರು ಕನ್ನಡಾಭಿಮಾನದಿಂದ ಹೇಳಿದರು.

"ಅದು ಸರಿಯೆ—ಅದು ಸರಿಯೆ .. ನೀವು ಹೇಳೋದು ಸರಿಯೆ....ನಾನು ಕನ್ನಡವೇ ಮಾಟ್ಲಾಡೋದು—ಊರ್ಕೆ ಹಾಗೆ ಚೆಪ್ಪಿದೆ....ವಿಾರೂ....ಬಲೇ ತಮಾಷಿ ಚೇಸ್ತ್ರೀರಿ....ದಫೆದಾರ್ರೂ...."

—ಎಂದು ಎಂತಹ ಉಗಿತವನ್ನೇ ಆದರೂ ತಮಾಷೆಗೆ ಕ್ಯಾಕರಿಸಿದ್ದು ಎಂದು ತಿರುಗಿಸಬಲ್ಲ ಚಾಣಕ್ಯತನವಿತ್ತು ಅನಂತರಾಮ ಶೆಟ್ರಲ್ಲಿ.

"ತೊಕೊಳಿ....ಕಾಫಿ ತೀಸ್ಕೊಳ್ಳಿ...."

—ಎಂದು ಚಿನ್ನೋಡು ತಂದ ಕಾಫಿ ಮುಂದೆ ಹಿಡಿದರು. ಬೀರು ತೆಗೆದರು ಅದರ ಒಳಗಿನ ಇನ್ನೊಂದು ಖಾನೆಯಿಂದ ಒಂದು ಚಿಕ್ಕ ಡಬ್ಬಿ ತೆಗೆದರು. ಅದರ ಮುಚ್ಚಳ ತೆಗೆಯಲು ಕೊಂಚ ಕಷ್ಟವಾಯಿತು. ದಫೆದಾರು ಎಂದೂ ಅವರಾಗೇ ಲಂಚ ತಿಂದವರಲ್ಲ—ತಿನ್ನಿಸಿದಾಗ ಬಿಟ್ಟವರಲ್ಲ. ಈಗ ಈ ಪುಟ್ಟ ಡಬ್ಬಿಯಿಂದ ಹಸಿರುನೋಟು ಒಂದು ತೊಗೊಳ್ಳಲೇಬೇಕೆಂದು ಶೆಟ್ರು ಹಟ ಹಿಡಿದರೆ ಏನು ಮಾಡುವುದೂ ? ಎಂದು ಮನಸ್ಸಿನ ತುಮುಲ ಯುದ್ಧದಲ್ಲಿ ನಿರತರಾದಾಗ—ಆ ಯುದ್ಧ ನಿಂತದ್ದು ತಟ್ಟನೆ ಆ ಡಬ್ಬಿಯ ಮುಚ್ಚಳ ತೆಗೆದೊಡನೆ ಘಂ ಎಂದು ಹಸುವಿನ ಬೆಣ್ಣೆಯ ವಾಸನೆ ದಫೆದಾರರ ಫಿಲ್ಟರ್ ಮಾಸೆಯಲ್ಲಿ ಶೋದಿತವಾಗಿ ಮೂಗು ಸೇರಿತು. ಅನಂತರಾಮು ಶೆಟ್ರು ಅದರಿಂದ ಎರಡು ಗಜ್ಜುಗದ ಗಾತ್ರ ಬೆಣ್ಣೆಗುಳಿಗೆ ತೆಗೆದು ಕಾಫಿ ಲೋಟಕ್ಕೆ ಎಸೆದರು.

"ಇದು ನೋಡಿ—ಇದು ಅಪ್ಪಟ ಮಂಡ್ಯದ ಹಸುವಿನ ಅಸಲ್ ನಂಬರ್ ಒನ್ ನವನೀತನು....ಕಾಫಿಗೆ ಹಾಕಲೇ ಇದು ಚೆನ್ನ .. ತೊಗೊಳ್ಳಿ"।

—ಎಂದಾಗ ಮಿಾಸೆ ಅಚಿ ಈಚಿ ಸರಿಸಿ ಗಟಗಟನೆ ಕುಡಿದರು. ನಿಜಕ್ಕೂ ಇದು ತುಂಬಾ ಚೆನ್ನಿತ್ತು. ಪ್ರಸನ್ನ ವದನಂ ಧ್ಯಾಯೇತ್ ಎಂಬ ಸೂತ್ರದಂತೆ ಮುಖದಲ್ಲಿ ಕಿರುನಗೆ ಮೂಡಿದೊಡನೆ ಅನಂತಯ್ಯಗಾರು ಮಾತಾಡಿದರು.

"ಇಕ್ಕಡ ನೋಡಿ....ಏನು ಬೇಕಾಗಿತ್ತು ನಿಮಗೆ ಚೆಪ್ಪಂಡಿ" ಕೈಹೊಸೆದರು

"ನಿಮ್ಮ ಮೇಲೆ ಕೇಸು ಹಾಕಬೇಕು"

"ಯಾಕೆ ?"

"ನನ್ನ ಕೇಸು ಹಾಳಾಗಿ ಹೋಯ್ತು ನಿಮ್ಮ ದೆಸೆಯಿಂದ"

"ಅದೆಟ್ಲ ದಫೆದಾರ್‌ಗಾರ್ಲೂ"

"ಸಿಕ್ಕ ಸಾಕ್ಷಿ ಯಾರೂ—ಕಳ್ಳನ ಮೇಲೆ ಯಾವ ಕೇಸು ಹಾಕಿದ್ದೂನ್ನೋದು ಮತುರ್ಹೋಯ್ತು."

"ಅಪ್ಪ್ಟನ!! ಅದೆಟ್ಲಾ ?"

"ಅದೆಂಥಾದ್ರಿ ನೀವು ಕೊಟ್ಟುಕಳಿಸಿದ್ದು ಮೊನ್ನೆ ತುಪ್ಪ!....ಅದು ತುಪ್ಪವೆ ? ಥೂ..."

"ಯಾರು ತೀಸ್ಕೊಂಡು ಹೋಗಿದ್ದು"

"ಅದೇ ಕಾನಿಸ್ಟೇಬಲ್ ಫಕೀರಸ್ವಾಮಿ ತರ್ಲಿಲ್ವೆ, ನೀವು ಕಳಿಸಲಿಲ್ವೇ."

"ಇವತ್ತು ನೋಡಿ—ಈಗ ತೊಗಳ್ಳಿ ಹರ್ಸ"

"ಅವತ್ತಿಂದಕ್ಕೆ ಸಿಕ್ಷಿ ಬೇಡವೆ ?....ನಡೀರಿ ಹೋಗೋಣ."

"ದ|| ದೇರಣ್ಣೋರಾಗಾರ್ಲೂ....ಕ್ಷಮಿಸಂಡಿ....ಅಯಿಂದಿ ಆಗೋಯ್ತು...."

"ಲ್ಲಿ) ನಿಮ್ತು ತಪ್ಪಿನಿಂದ ಸರ್ಕಾರಿ ಕೆಲಸ ಕಾರ್ಯಗಳಿಗೆ ಧಕ್ಕೆ ಬರ್ತಾ ಇದೆ...."

"ಔನಾ....ತಪ್ಪು—ತಪ್ಪು .. ಅದಿ...."

"ಯಾವುದು ?"

"ಅದೇ ಗೌರ್ಮೆಂಟು ಪನಿ ...ಅಲ್ಲ ಕೆಲಸ ಕೆಟ್ಟುಹೋಗೋದಿ...."

"ನಿಮ್ಮ ಮನೆ ಕಾಯುವಾಯ್ತು .ಅಲ್ಲ್ರೀ—ಆ ಹಾಳು ತುಪ್ಪದಲ್ಲಿ ಮಾಡಿದ ಪಕೋಡ ತಿಂದರೆ ಪಾಷಾಣ ತಿಂದಹಾಗಾಯ್ತಲ್ರೀ...ಪಕೋಡ ಇಲ್ದೆ ಇದ್ರೆ ನಾನು ಮನುಷ್ಯನೇನ್ರಿ? ನಾನು ಮನುಷ್ಯನಲ್ದೆ ಇದ್ರೆ ಹ್ಯಾಗ್ರಿ ದಫೆದಾರ್‍ರ್ಗಿರಿ ಮಾಡೋದು? ದಫೆದಾರ್‍ರ್ಗಿರಿ ಇಲ್ದೆ ಇದ್ರೆ ಕಳ್ಳರು—ಕಾಕರು ಹ್ಯಾಗೆ ಸಿಗೋದು—ದೇಶದಲ್ಲಿ ಈ ಪುಂಡರು ಪುಡಾರಿಗಳೂ ಹೆಚ್ಚಿ ಹಾಹಾಕಾರ ತುಂಬಲ್ಲವೇನ್ರೀ ಅದಕ್ಕೆಲ್ಲಾ ನಿಮ್ಮ ಕೆಟ್ಟ ತುಪ್ಪವೇ ಕಾರಣ ಅಲ್ಲವೇನ್ರೀ....ಹೇಳಿ"

—ಎಂದು ಎಲ್ಲಕ್ಕೂ ಆ ತುಪ್ಪವೇ ಕಾರಣವೆಂದು ಸಿದ್ಧಾಂತಮಾಡಿ ತೋರಿಸಿದಾಗ ಶೆಟ್ಟರು ಪೆಚ್ಚಾದರು. ಅನಂತಯ್ಯಗಾರು ಒಂದೇ ಮಾತು ಹಿಡಿದರು. ಕಳ್ಳರು—ಕಾಕರು ಎಂಬುದರಲ್ಲಿನ 'ಕಾ ಕ' ಎಂಬುದನ್ನು ಮಾತ್ರ ಎತ್ತಿಕೊಂಡರು.

"ಕಾ ಕ....ಹೌದಂಡೀ....ಕಾಕಾರು ಜಾಸ್ತಿ ಆಗಿಂದಿ."

"ಅಂದಮೇಲೆ ನೀವೇ ಮೂಲಕಾರಣ ಅಂದಮೇಲೆ ಶಿಕ್ಷೆ ನಿಮಗೇ ಆಗಬೇಕು, ನಡೀರಿ"

"ಕೊಂಚ ಇರಂಡಿ....ಧಫೆದಾರ್‌ಗಾರ್ಲೂ....ಲೇ ೯ ಚಿನ್ನೋಡಾ ..." ಎಂದು ಕೂಗುತ್ತಾ ಹೊರಕ್ಕೆ ಹೋಗಿ ಮತ್ತೆ ಬಂದರು ಬಂದು ಹೇಳಿದರು—

"ದಫೆದಾರ್‍ರೇ....ನೀವು ತುಪ್ಪ ಕೊಳ್ಳೋದು ಬಿಟ್ಟುಬಿಡಂಡಿ....ಯಾಕೇನ್ರಿರೊ ಈಗ ನೀವು ಉಪಯೋಗಿಸಬೇಕಾದ್ದು ಬೆಣ್ಣೆ. ಕಳ್ಳರು-ಕಾಕರು ಅನಿ ಚೆಪ್ಪಿದಿರೇ—ಅದರಲ್ಲಿ ಈ ಕಾಕರು ನೀವು ಆದರೆ ಯಾರಮೇಲೂ ಕೇಸು ಬೀಳಲ್ಲ....ಈಗಿನ ಕಾಲದಲ್ಲಿ ಯಾರು ಹೆಚ್ಚು ಬೆಣ್ಣೆ ಹಚ್ಚುನರೋ ಅವರೇ ಮುಂದೆ ವಚ್ಚೇದಿ. ಅರ್ಥವಾ—ಇಕೊ ಈ ಬೆಣ್ಣೆ ತೊಗೊಳ್ಳಿ—ಸಮಯ ನೋಡಿ ನಿಮ್ಮ ಸೂಪ್ರೆಂಟರ ಬೆಲ್ಟು-ಗುಂಡಿ-ಬಂದೂಕು-ಕತ್ತಿ-ಕಾರು ಎಲ್ಲಕ್ಕೂ ಮಸ್ಕಲಗಾವ್ ಮತ್ತೆ ಶ್ರೀಮತಿ ಸೂಪ್ರೆಂಟರು ಯಾವುದಕ್ಕೆ ಹೆಚ್ಚು ಗಮನ ಕೊಡ್ತಾರೆ— ಅದಕ್ಕೆ ಸರಬರಾಜು ಮತ್ತೆ ಅವರಿಗೂ ಬೆಣ್ಣೆ ಸವರಿ 'ಕಾ ಕಾ' ರಾಜರಾಗಿ. ಆಗ ಖಂಡಿತ ಮುಂದೆ ಬರ್‍ತೀರ—ನೀವು ಸಬ್ಬಿನಿಸ್ಪೆಕ್ಟರಾಗಬೇಡವೆ?"

"ಆಗದೆ ಇದ್ರೆ ಸಾವಂತ್ರಿ—ಬೀರಣ್ಣ ಮಗು ಬರ್‍ತಾರೆಯೆ?...."

"ಮತ್ತೇ .... ನೀವು ನಿಮ್ಮ ಕಾರ್ಯ ತತ್‌ಪರತೆಗೆ ಪಕೋಡ ನಂಬಿತೆ ಆಯ್ತುಂದಾ. ಬೆಣ್ಣೆ .. ಬೆಣ್ಣೆ ನಂಬಂಡೀ...."

"ನಿಮ್ಮಲ್ಲಿ ಹಸನ್ ಬೆಣ್ಣೆ ಉಂಟೊ?"

"ಈಗ ಕಾಫಿಗೆ ಹಾಕಿದ ಬೆಣ್ಣೆ ಬಾಗ ಇರಲಿಲ್ಲವೋ?...."

ಚಿನ್ನೋಡು ಬಂದ. ಅವನು ಕೊಟ್ಟಿದ್ದು ಒಂದು ದೊಡ್ಡ ಪೊಟ್ಟ. ಅನಂತ ರಾಮುಗಾರ್ಲು ಆ ಪೊಟ್ಟ ಬಿಚ್ಚಿ ದಫೆದಾರರ ಮುಂದೆ ಹರಡಿದರು ಗುಂಡಪ್ಪನ ಹೋಟ್ಲಿನ ಅಪ್ಪಟ ತುಪ್ಪದ, ಗುಕ್ಕಿಗೊಂದು ಗೋಡಂಬಿ ಬರುವ—ಕರಿಬೇವು, ಈರುಳ್ಳಿ. ಪುದೀನ, ಕೊತ್ತುಂಬ್ರಿ, ಚಕ್ಕೆ, ದಾಲ್ಚಿನ್ನಿ ವಾಸನೆ ಹದವಾಗಿ ಹೊಂದಿದ ಅಸಲ್ ಪಕೋಡದ ರಾಶಿ ಬಿದ್ದಿತ್ತು ದಫೆದಾರರ ಮುಂದೆ. ಒಂದು ಕ್ಷಣ ಆ ಪಕೋಡ ಸಾ॥ ಸ್ವಾತಂತ್ರ್ಯದಂತೆ ಶೋಭಿಸಿತು. ಸಬ್ಬಿನಿಸ್ಪೆಕ್ಟರಾಗುವ 'ಕಾಕಾರಾಜ' ಮಾರ್ಗ ವನ್ನು ತೋರಿಸಿದ ಅಂದರಿಕಿ ಮಂಚಿವಾಡು ಅನಂತರಾಮಯ್ಯಗಾರ್ರು ಜರೀಪೇಟ, ಎದ್ದು ಹಣೆಯಲ್ಲಿ ಹೊಳೆಯುತ್ತಿದ್ದ ದೊಡ್ಡ ಮೂರು ನಾಮಗಳು, ಕರೀಘಟ ಕಾಲರ್ ಷರಟು, ಮೇಲುಕೋಟೆ ಅಂಚಿನ ಪಂಚೆಗಳಿಂದ ಅಲಂಕೃತರಾಗಿ ಸಾಕ್ಷಾತ್ ತಿರುಪತಿ ವೆಂಕಟರಮಣನಂತೆ ಶೋಭಿಸಿದರು. ವೀಸೆ ಅಮೆರಿಕನ್ ಕೊಬ್ಬು ಮಿಶ್ರಿತ ಬೆಣ್ಣೆ ಯನ್ನು ಅಪ್ಪಟವೇ ಎಂದುಕೊಂಡು—ಕೇಸು ಮರೆತು ಹೊರಬಿದ್ದರು ದಫೆದಾರ್ ದೇರಣ್ಣನವರು.


— ದಾಶರಥಿ ದೀಕ್ಷಿತ್.

ಡೊಂಕೆ ?

ಒಂದು ಡೊಂಕು—ಆದರೆ,
ಮತ್ತೊಂದೂ ಡೊಂಕೆ—ವಿಟ್ಠಲ ?
ಟೋಪಿ ಡೊಂಕು—ಆದರೆ,
ಬುರುಡೆ ಡೊಂಕೆ—ವಿಟ್ಠಲ ?
ಬುರುಡೆ ಡೊಂಕು—ಆದರೆ,
ಮೆದುಳು ಡೊಂಕೆ—ವಿಟ್ಠಲ ?
ಮೆದುಳು ಡೊಂಕು—ಆದರೆ,
ಬಾಯಿ ಡೊಂಕೆ—ವಿಟ್ಠಲ ?
ಬಾಯಿ ಡೊಂಕು—ಆದರೆ,
ನಾಲಗೆ ಡೊಂಕೆ—ವಿಟ್ಠಲ ?
ನಾಲಗೆ ಡೊಂಕು—ಆದರೆ,
ನುಡಿ ಡೊಂಕೆ—ವಿಟ್ಠಲ ?
ನುಡಿ ಡೊಂಕು—ಆದರೆ
ಅರ್ಥ ಡೊಂಕೆ—ವಿಟ್ಠಲ ?
ಅರ್ಥ ಡೊಂಕು—ಆದರೆ,
ಅನರ್ಥ ಬಂತೆ—ವಿಟ್ಠಲ ?

—ಪಾರ್ಥಸಾರಥಿ.

ಶೀಘ್ರದಲ್ಲಿಯೇ ಬಿಡುಗಡೆಯಾಗಲಿದೆ !



ಜನತಾ ಪಿಕ್ಚರ್ಸ್‌ರವರ—

ಮಣಿಮಾಲೈ (ತಮಿಳು)

ಜೆಮಿನಿ ಗಣೇಶನ್, ಸಾವಿತ್ರಿ, ಶ್ರೀರಾಮ್, ಗಿರಿಜಾ, ನಾಗಯ್ಯ,

ಡಿ. ಬಾಲಸುಬ್ರಹ್ಮಣಂ ಮುಂತಾದವರು.

★

ನಿರ್ದೇಶನ: **ಚಿತ್ರಪು ನಾರಾಯಣಮೂರ್ತಿ,** ಬಿ.ಎ.,

VIKRAM RELEASE

ಗುರುಬ್ರಹ್ಮ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ

ನಿಜವೋ? ಸುಳ್ಳೋ? ಬಂದು ನೋಡಿ ನಿರ್ಧಾರ ಮಾಡಿ!

ಮಹಾ ಕರ್ನಾಟಕದ ಮುಕ್ಕೋಟಿ ಕನ್ನಡಿಗರ ಮನೆಮಾತಾದ

ಪದ್ಮಿನಿ ಪಿಕ್ಚರ್ಸ್‌ರವರ

ಸ್ಕೂಲ್ ಮಾಸ್ಟರ್ (ಕನ್ನಡ)




ಬಿ. ಆರ್. ಪಂತುಲು, ಎಂ ವಿ. ರಾಜಮ್ಮ, ಸಾಹುಕಾರ್ ಜಾನಕಿ, ಬಿ ಸರೋಜಾದೇವಿ,
ಡಿಕ್ಕಿ ಮಾಧವರಾವ್, ಉದಯಕುಮಾರ್, ಸೂರ್ಯಕುಮಾರ್, ಬಾಲಕೃಷ್ಣ,
ನರಸಿಂಹರಾಜು ಮತ್ತು ಶಿವಾಜಿ ಗಣೇಶನ್ (ಗೆಸ್ಟ್ ಆರ್ಟಿಸ್ಟ್)

ನಿರ್ಮಾಪಕ-ನಿರ್ದೇಶಕ:	ಸಂಗೀತ:	ಸಂಭಾಷಣೆ-ಹಾಡುಗಳು:
ಬಿ. ಆರ್. ಪಂತುಲು	ಟಿ. ಜಿ. ಲಿಂಗಪ್ಪ	ಕಣಗಾಲ್ ಪ್ರಭಾಕರಶಾಸ್ತ್ರಿ

31—1—58 ರಿಂದ ನಡೆಯುತ್ತಿದೆ!

ಬೆಂಗಳೂರು:	ದಾವಣಗೆರೆ:	ಶಿವಮೊಗ್ಗ:	ಚಿತ್ರದುರ್ಗ:
ಗೀತಾ-ಸೂಪರ್	ಅಶೋಕಾ	ವಿನಾಯಕ	ರೂಪವಾಣಿ
ತುಮಕೂರು:	ಹಾಸನ:	ಮಂಗಳೂರು:	ಚಿಕ್ಕಮಗಳೂರು:
ಕೃಷ್ಣಾ	ಪಿಕ್ಚರ್ ಪ್ಯಾಲೇಸ್	ರಮಾಕಾಂತ್	ಗುರುನಾಥ

An EMERALD Release



— ವೈಟೋಫೆರಿನ್ —

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೇಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು 3.

Printed by B. S. Iyengar, Bangalore City.
Publisher—B. N. Gupta. Editor—M. Sivaram.